# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 05-09-2018ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| **ಮಹದೇವ. ಎಂ. – ಅಧ್ಯಕ್ಷರು** | ಕೌನ್ಸಿಲ್ ಕಾರ್ಯದರ್ಶಿ, |
| **ಎಂ. ಆನಂದ್ – ಸದಸ್ಯರು** | ಮುಖ್ಯಲೆಕ್ಕಾಧಿಕಾರಿ, |
| **ಉಮಾ. ಎನ್ – ಸದಸ್ಯರು** | ಮುಖ್ಯ ಆರ್ಥಿಕ ಅಧಿಕಾರಿ, |
| **ಮಂಜುಳ ವಿಜಯಕುಮಾರ್ – ಸದಸ್ಯರು** | ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ), (ಸಾರಿಗೆ), (ಓ.ಎಫ್.ಸಿ), (ಯೋಜನೆ-ಕೇಂದ್ರ-3), |
| **ಅನ್ವರ್ ಪಾಷ. ಎಸ್ – ಸದಸ್ಯರು** | |
| **ಆಂಜನಪ್ಪ. ಎಂ – ಸದಸ್ಯರು** | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಾರಿಗೆ), (ಹೆಚ್.ಬಿ.ಆರ್.ಲೇಔಟ್), |
| **ಕೆ.ಗಣೇಶ್ ರಾವ್ ಮಾನೆ – ಸದಸ್ಯರು** | |
| **ದಾಸೇಗೌಡ. ಸಿ – ಸದಸ್ಯರು** | ತಹಸಿಲ್ದಾರ್ (ಭೂಸ್ವಾಧೀನ) |
| **ಶಿವಕುಮಾರ್. ಕೆ – ಸದಸ್ಯರು** | ಸಂಬಂಧಪಟ್ಟ ಅಧಿಕಾರಿಗಳು, |
| **ಎಂ. ವೆಂಕಟೇಶ್ (ಸಂಗಾತಿ) – ಸದಸ್ಯರು** | --- |
| **ಹೆಚ್.ಸಿ. ನಾಗರತ್ನ ರಾಮಮೂರ್ತಿ – ಸದಸ್ಯರು** | --- |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ: ತೆಆಸ್ಥಾಸ/ 210 /2017-18*

ಜಂಟಿ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ ಮತ್ತು ಆರೋಗ್ಯ) ರವರ ದಿನಾಂಕ: 08-12-2017ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರ ಆದೇಶ ಸಂಖ್ಯೆ: ಪೌ.ನಿ/18/ಘವನಿ/2015-16 ದಿ:06-05-2016ರಲ್ಲಿ ಬಿಬಿಎಂಪಿಗೆ ಸ್ವಚ್ಛ ಭಾರತ್ ಅಭಿಯಾನದ ಅನುದಾನದಡಿಯಲ್ಲಿ ಕೇಂದ್ರದ ಪಾಲಿನ ಅನುದಾನ ರೂ.81.66 ಕೋಟಿಗಳು ಹಾಗೂ ರಾಜ್ಯದ ಪಾಲಿನ ಅನುದಾನ ರೂ.27.22 ಕೋಟಿಗಳು ಒಟ್ಟು ರೂ.108.88 ಕೋಟಿಗಳ ಅನುದಾನವನ್ನು ನಿಗಧಿಪಡಿಸಿ ಒಟ್ಟು ರೂ.41.15 ಕೋಟಿಗಳ ಅನುದಾನವನ್ನು ಬಿಬಿಎಂಪಿಗೆ ಬಿಡುಗಡೆ ಮಾಡಲಾಗಿತ್ತು.

ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರು ಅನುದಾನ ನಿಗಧಿಪಡಿಸಿರುವಂತೆ 2016-17ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ ಪಿ3112 ಅಡಿಯಲ್ಲಿ ರೂ.50.69 ಕೋಟಿಗಳಿಗೆ ಹಾಗೂ 2017-18ನೇ ಸಾಲಿನಲ್ಲಿ ರೂ.400.00 ಲಕ್ಷಗಳಿಗೆ ಒಟ್ಟು ರೂ.60.69 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ರೂ.48.19 ಕೋಟಿಗಳ ಅನುದಾನವನ್ನು ಸರ್ಕಾರದಿಂದ ನಿರೀಕ್ಷಿಸಿ ಬೆಳ್ಳಹಳ್ಳಿ, ಬಾಗಲೂರು ಮತ್ತು ಮಿಟ್ಟಗಾನಹಳ್ಳಿ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಶಾಸಕರು ಮಹದೇವಪುರ ವಿಧಾನಸಭಾ ಕ್ಷೇತ್ರ ಹಾಗೂ ಕೃಷಿ ಸಚಿವರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ಶಾಸಕರು ರವರು ಸಾರ್ವಜನಿಕ ಸೇವಾ ಹಾಗೂ ಆರೋಗ್ಯ ಹಿತದೃಷ್ಟಿಯಿಂದ

ಕೈಗೊಳ್ಳಬೇಕಾಗಿರುವ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಕೋರಿರುವ ಕಾಮಗಾರಿಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು 2017–18ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಅಭಿಯಾನ ಅನುದಾನ ಲೆಕ್ಕಶೀರ್ಷಿಕೆ ಪಿ3112 ಅಡಿ ಅಳವಡಿಸಿಕೊಳ್ಳುವುದನ್ನು ನಿರೀಕ್ಷಿಸಿ ಸಾರ್ವಜನಿಕ ಹಿತದೃಷ್ಟಿಯಿಂದ ಕಾಮಗಾರಿಗಳನ್ನು ಕೈಗೊಳ್ಳಲು ಜಾಬ್‌ಸಂಖ್ಯೆಯನ್ನು ನೀಡಲಾಗಿದೆ.

ಈ ಹಿನ್ನಲೆಯಲ್ಲಿ ಸ್ವಚ್ಛಭಾರತ್ ಅಭಿಯಾನ ಅನುದಾನ ರೂ.48.19 ಕೋಟಿಗಳನ್ನು ಲೆಕ್ಕಶೀರ್ಷಿಕೆ ಪಿ3112 ಅಡಿ 2017–18ನೇ ಸಾಲಿಗೆ ಅಳವಡಿಸಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *02]. ವಿಷಯದ ಸಂಖ್ಯೆ: ತೆಆಸ್ಥಾಸ/ 231 /2017–18*

ಆಯುಕ್ತರ ದಿನಾಂಕ: 27–01–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಹೊಸ ವಾಹನಗಳ ಅಗತ್ಯವಿರುವುದಾಗಿ ತಿಳಿಸಿ ಹೊಸ ವಾಹನಗಳನ್ನು ಒದಗಿಸಲು ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ.

ಹೊಸ ವಾಹನಗಳನ್ನು ಖರೀದಿ ಮಾಡಲು DGS&D ದರಗಳಲ್ಲಿ ಕಾರು ಮಳಿಗೆ (ಷೋ ರೂಮ್) ರವರಿಂದ ನೀಡಲು ಕೋರಿದ್ದು, ಸದರಿ ಮಳಿಗೆ ರವರು DGS&D ದರವನ್ನು ಜನವರಿ–2017ರ ಮಾಹೆಯಿಂದ 2017–18ನೇ ಸಾಲಿನಲ್ಲಿ ನಿಗಧಿ ಪಡಿಸಿರುವುದಿಲ್ಲವಾದ್ದರಿಂದ ಪಾಲಿಕೆಯಿಂದ ಖರೀದಿಸ ಬಹುದಾದ ಹೊಸ ವಾಹನಗಳನ್ನು GEM (Government E Marketing) ನಿಂದ ಪಡೆಯ ಬಹುದಾಗಿದ್ದು GEM ನ ಅಡಿ ನೊಂದಣಿ ಮಾಡಲಾಗಿರುತ್ತದೆ.

ಮೇಲ್ಕಂಡ ಮಾಹಿತಿಯನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಸಿಯಾಜ್ ಮತ್ತು ಇನ್ನೋವಾ ಖರೀದಿಸಲು ಪ್ರಸ್ತಾವನೆ ಇರುತ್ತದೆ ಮತ್ತು ಹೊಸ ವಾಹನ ಖರೀದಿಗಾಗಿ ಪಿ–0110 ಅನುದಾನದ ಅಡಿಯಲ್ಲಿ ರೂ.150.00 ಲಕ್ಷ ಅನುದಾನ ಲಭ್ಯವಿರುತ್ತದೆ.

ಹೊಸ ವಾಹನ ಖರೀದಿಗಾಗಿ ರೂ.150.00 ಲಕ್ಷಗಳ ಅನುದಾನ ಲಭ್ಯವಿರುವುದರಿಂದ ಪ್ರಸ್ತಾಪಿಸಲಾಗಿರುವ ಒಟ್ಟು 12 ವಾಹನಗಳಲ್ಲಿ 09 Toyota Innova (7 SEATER-DIESEL) ಹಾಗೂ ಒಟ್ಟು 03 Maruti Suzuki CIAZ (Sigma-PETROL) ವಾಹನಗಳನ್ನು ಖರೀದಿಸಲು ಅಭಿಪ್ರಾಯಿಸಲಾಗಿರುತ್ತದೆ.

ಮುಂದುವರೆದಂತೆ, GEM ದರಗಳಂತೆ (ರಸ್ತೆ ತೆರಿಗೆ ಮತ್ತು ವಾಹನ ವಿಮೆ ಹೊರತುಪಡಿಸಿ) ಒಟ್ಟು 09 ಇನ್ನೋವಾ ವಾಹನಗಳಿಗೆ 09*12,76,353.00=1,14,87,177 (ಒಂದು ಕೋಟಿ ಹದಿನಾಲ್ಕು ಲಕ್ಷದ ಎಂಭತ್ತೇಳು ಸಾವಿರದ ಒಂದು ನೂರ ಎಪ್ಪತ್ತೇಳು ರೂಪಾಯಿಗಳು ಮಾತ್ರ) ಹಾಗೂ ಒಟ್ಟು 03 ಸಿಯಾಜ್ ವಾಹನಗಳಿಗೆ 03*712284.13=21,36,852.39 (ಇಪ್ಪತ್ತೊಂದು ಲಕ್ಷದ ಮೂವತ್ತಾರು ಸಾವಿರದ ಎಂಟು ನೂರ ಐವತ್ತೇರಡು ರೂಪಾಯಿಗಳು ಮಾತ್ರ) ಗಳಾಗಿರುತ್ತದೆ. ಒಟ್ಟು ಮೊತ್ತ ರೂ.

1,14,87,177 + 21,36,852 = 1,36,24,029.00 (ಒಂದು ಕೋಟಿ ಮೂವತ್ತಾರು ಲಕ್ಷದ ಇಪ್ಪತ್ನಾಲ್ಕು ಸಾವಿರದ ಇಪ್ಪತ್ತೊಂಭತ್ತು ರೂಪಾಯಿಗಳು ಮಾತ್ರ) ಗಳಾಗಿರುತ್ತದೆ.

ಮೇಲ್ಕಂಡ ಮಾಹಿತಿಗಳನ್ನು ತಮ್ಮ ಅವಗಾಹನೆಗೆ ಮಂಡಿಸುತ್ತಾ, ಪಾಲಿಕೆಯ ಅಧಿಕಾರಿಗಳಿಗೆ ಮತ್ತು ಪಾಲಿಕೆಯ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ 09 ಟಯೋಟಾ ಇನ್ನೋವಾ ಕ್ರಿಸ್ಟಾ ಮತ್ತು 03 ಮಾರುತಿ ಸಿಯಾಜ್ ವಾಹನಗಳನ್ನು ಖರೀದಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಮಂಡಿಸಿದೆ.

**ನಿರ್ಣಯ: ಪ್ರಸ್ತಾಪಿತ ವಿಷಯದಲ್ಲಿ ತುರ್ತು ಅವಶ್ಯಕತೆಯನ್ನು ಅವಲೋಕಿಸಿ 2018-19ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಿರುವ ಅನುದಾನದಲ್ಲಿ 02 (ಎರಡು) ಇನ್ನೋವ ಕಾರು ಉಪ ಮಹಾಪೌರರು ಮತ್ತು ಆಯುಕ್ತರು ರವರಿಗೆ, 04 (ನಾಲ್ಕು) ಸಿಯಾಝ್ ಡೀಸೆಲ್ ಕಾರುಗಳು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ/ಅಧಿಕಾರಿಗಳಿಗೆ ಹಾಗೂ 03 (ಮೂರು) ಆಂಬ್ಯೂಲೆನ್ಸ್ (1) ಮೂಡಲಪಾಳ್ಯ ಹೆರಿಗೆ ಆಸ್ಪತ್ರೆ ಮತ್ತು (2) ಮುನಿರೆಡ್ಡಿಪಾಳ್ಯ ಹೆರಿಗೆ ಆಸ್ಪತ್ರೆ ಮತ್ತು (3) ಕಮಲನಗರ ಹೆರಿಗೆ ಆಸ್ಪತ್ರೆಗಳಿಗೆ ವಿತರಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***03]. ವಿಷಯದ ಸಂಖ್ಯೆ: ತೆಆಸ್ಥಾಸ/ 240 /2017-18***

***ದಿನಾಂಕ 14-02-2018ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಸಭೆಯ ನಡವಳಿ:-***

ಮಾನ್ಯ ಸಚಿವರು ಶ್ರೀ. ಕೆ ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರ ಪತ್ರ ಸಂಖ್ಯೆ: ಬೆಂ.ಅ & ನ.ಯೋ.ಸ/489/2017-18 ದಿನಾಂಕ:27.1.2018ರ ಪತ್ರದಲ್ಲಿ ಸರ್ವಜ್ಞನಗರ ವಿಧಾನ ಸಭಾಕ್ಷೇತ್ರಕ್ಕೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳೊಯಿಂದ ಸರ್ವರಿಗೂ ಸೂರು ಯೋಜನೆಯಡಿಯಲ್ಲಿ ಬಡ ವರ್ಗದವರಿಗಾಗಿ 624 ಮನೆಗಳನ್ನು ಕಟ್ಟುತ್ತಿದ್ದು, ಸದರಿ ಯೋಜನೆಯಡಿಯಲ್ಲಿ 392 ಜನೆ ಪರಿಶಿಷ್ಟ ಜಾತಿ ಮತ್ತು 12 ಜನ ಪರಿಶಿಷ್ಟ ಪಂಗಡದವರಿಗೆ ರೂ. 48,000/-ಗಳಂತೆ ಒಟ್ಟು 404 ಫಲಾನುಭಿವಿಗಳಿಗೆ ರೂ.1,93,92,000/- ಮತ್ತು ಇತರೆ ಪಂಗಡಗಳ 220 ಪಲಾನುಭವಿಗಳಿಗೆ ವಂತಿಗೆಯಾಗಿ ರೂ.57,600/- ರೂ.ಗಳಂತೆ ರೂ.12672000/-ಗಳನ್ನು ಒಟ್ಟು 624 ಪಲಾನುಭವಿಗಳಿಗೆ ಒಟ್ಟು ಮೊತ್ತ ರೂ.3,20,64,000/-ಗಳನ್ನು ಪಾವತಿಸಬೇಕಾಗಿರುತ್ತದೆ. ಸದರಿ ನಿವಾಸಿಗಳು ಕಡು ಬಡವರಾಗಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಪಂಗಡದ ವಿಶೇಷ ಘಟಕದ ಅನುದಾನದಲ್ಲಿ ಎಸ್ಇಪಿ ಯಡಿಯಲ್ಲಿ ರೂ. 3,20,64/-ಗಳನ್ನು (624 ಪಲಾನುಭವಿಗಳಿಗೆ) ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಇವರಿಗೆ ನಿಯಮಾನುಸಾರ ಪಾವತಿ ಮಾಡುವಂತೆ ಆಯುಕ್ತರು, ಬೃಹತ್ ಬೆಂಗಳೂರ ಮಹಾನಗರ ಪಾಲಿಕೆ ರವರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ಸದರಿ ಪತ್ರದಲ್ಲಿ ಆಯುಕ್ತರು ಕೌನ್ಸಿಲ್ ಕಾರ್ಯದರ್ಶಿಯವರಿಗೆ "Please place it before Social Justice Committee" ಎಂದು ಸೂಚಿಸಿರುತ್ತಾರೆ, ಅದರಂತೆ ಕೌನ್ಸಿಲ್ ಕಾರ್ಯದರ್ಶಿಯವರು ಸದರಿ ಪ್ರಸ್ಥಾವನೆಯನ್ನು ಸಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುತ್ತಾರೆ.

**ಹಾಗೂ**

ಮಾನ್ಯ ಸಚಿವರು ಶ್ರೀ. ಕೆ ಜೆ. ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರ ಪತ್ರ ಸಂಖ್ಯೆ: ಬೆಂ.ಅ&ನ.ಯೋ.ಸ/490/2017-18 ದಿನಾಂಕ:27.1.2018ರ ಪತ್ರದಲ್ಲಿ ಸರ್ವಜ್ಞನಗರ ವಿಧಾನ ಸಭಾಕ್ಷೇತ್ರದಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದವರು ವಾಸ ಮಾಡುತ್ತಿರುವ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ತುರ್ತಾಗೆ ರೂ.5.00ಕೋಟಿ ಹಣವನ್ನು ಬಿಡುಗಡೆಮಾಡುವಂತೆ ಆಯುಕ್ತರು, ಬೃಹತ್ ಬೆಂಗಳೂರ ಮಹಾನಗರ ಪಾಲಿಕೆ ರವರಿಗೆ ಪತ್ರ ಮುಖೇನ ಸೂಚಿಸಿರುತ್ತಾರೆ. ಸದರಿ ಪತ್ರದಲ್ಲಿ ಆಯುಕ್ತರು ಕೌನ್ಸಿಲ್ ಕಾರ್ಯದರ್ಶಿಯವರಿಗೆ "Please place it before Social Justice Committee" ಎಂದು ಸೂಚಿಸಿರುತ್ತಾರೆ, ಅದರಂತೆ ಕೌನ್ಸಿಲ್ ಕಾರ್ಯದರ್ಶಿಯವರು ಸದರಿ ಪ್ರಸ್ಥಾವನೆಯನ್ನು ಸಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುತ್ತಾರೆ.

**ಮೇಲ್ಕಂಡ ಮಾನ್ಯ ಸಚಿವರ ಪ್ರಸ್ಥಾವನೆಗಳನ್ನು ಸಮಿತಿಯು ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನಿಸಿದೆ:-**

ಮೇಲ್ಕಂಡ ಮಾನ್ಯ ಸಚಿವರ ಪ್ರಸ್ಥಾವನೆಗಳನ್ನು ಸಮಿತಿಯು ಚರ್ಚಿಸಿ, ಮಾನ್ಯ ಸಚಿವರು, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ನಗರ ಜಿಲ್ಲಾ ಉಸ್ತವಾರಿ ಸಚಿವರು, ರವರ ಪ್ರಸ್ಥಾವನೆಯನ್ನು ಅನುಮೋದಿಸುತ್ತಾ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 14.02.2018ರ ಸಭೆಯ ನಿರ್ಣಯ.

***<u>-ಮುಂದೂಡಿದೆ-</u>***

## ***<u>04]. ವಿಷಯದ ಸಂಖ್ಯೆ: ತೆಆಸ್ಥಾಸ/ 242 /2017-18</u>***

ಪ್ರಧಾನ ಅಭಿಯಂತರರು ರವರ ದಿನಾಂಕ: 14-2-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜ ನಗರ) ಹಾಗೂ ಮುಖ್ಯ ಅಭಯಂತರರು (ಪಶ್ಚಿಮ) ರವರು ದಿ: 30-12-2017 ರಂದು ಮಾನ್ಯ ಶಾಸಕರು ಗೋವಿಂದರಾಜ ನಗರ ವಿಧಾನ ಸಭಾ ಕ್ಷೇತ್ರ ರವರು ಮಾನ್ಯ ಆಯುಕ್ತರು ರವರಿಗೆ ಪತ್ರ ನೀಡಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2016-17ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ-3075 ಅಡಿಯಲ್ಲಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ರಲ್ಲಿನ ಈ ಕೆಳಕಂಡಂತೆ ಜಾಬ್ ಕೋಡ್ ನೀಡಿರುವ ಕಾಮಗಾರಿಗಳಿಗೆ ಬದಲಾಗಿ ವಾರ್ಡ್ ಸಂಖ್ಯೆ:128 ರಲ್ಲಿ ಬದಲಿ ಕಾಮಗಾರಿಗಳನ್ನು ನಿರ್ವಹಿಸಲು ಜಾಬ್ ಸಂಖ್ಯೆ ನೀಡಲು ಹಾಗೂ ಸದರಿಕಾಮಗರಿಗಳನ್ನು ತುರ್ತಾಗಿ ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ನಿರ್ವಹಿಸಲು ಅಗತ್ಯ ಕ್ರಮವಹಿಸಲು ಕೋರಿರುತ್ತಾರೆ.

| ಕ್ರ. ಸಂ | ಪಿ.ಆರ್.ನಂ, ದಿ | ಈಗಾಗಲೇ ಜಾಬ್ ಕೋಡ್ ಪಡೆದ ಕಾಮಗಾರಿ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಬದಲಿ ಕಾಬ್ ಕೋಡ್ ನೀಡಲು ಕೋರಿರುವ ಕಾಮಗಾರಿ | ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ |
|---|---|---|---|---|---|
| 1 | **EIC/PR/11084 / 2017-18, Dt:14-02-2018** | Providing asphalting to 23 cross Govindha nagar Govindarajaswamy Temple backside road in ward No.104 and providing asphalting to Gangadhara Layout cross roads in ward No.104 (104-17-000056) | 50.00 | Providing balance works to Chandra layout park at 11th cross road near SWD in warf No.128 | 50.00 |

| | | | | | |
|---|---|---|---|---|---|
| 2 | **EIC/PR/11083 /2017-18, Dt:14-02-2018** | Providing drinking water filter units of works in Govindarajanagara constituency (Keonics) in ward No.103, 104, 105, 106, 125, 126, 127, 128 and 131 (103-17-000075) | 200.00 | Providing asphalting to cross roads of Chandra layout 1stage, 1phase in ward No.128 | 100.00 |
| | | | | Providing asphalting to cross roads of Chandra layout 1st stage 11 phase in wad No.128 | 100.00 |
| 3 | **EIC/PR/ 11084/2017-18, Dt:14-02-2018** | Development of park in metro rail entire stretch along the road side in Govindarajanagara constituency in ward No.104, 105 & 125 (125-17-000039) | 100.00 | Providing ornamental Grill to park at BCC Layout beside indira canteen in ward No.128 | 70.00 |
| | | | | Improvement s to Drain of western side of 11th cross Chandra layout in ward No.128 | 30.00 |
| | | **TOTAL** | **350.00** | **TOTAL** | **350.00** |

ಮುಂದುವರೆದು ಮಾನ್ಯ ಶಾಸಕರು ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರ ರವರ ಕೋರಿಕೆಯಂತೆ ಬದಲಿ ಕಾಮಗಾರಿಗಳಿಗೆ ಹೊಸದಾಗಿ ಜಾಬ್ ಕೋಡ್ ನಂಬರ್ ನೀಡಲು ಅನುಮೋದನೆ ಕೋರಿ ಪ್ರಸ್ಥಾವನೆ ಸಲ್ಲಿಸಿದ್ದು, ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ಥಾವನೆಯ ಸೂಕ್ತ ತೀರ್ಮಾನಕ್ಕಾಗಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಮುಖ್ಯ ಆರ್ಥಿಕ ಅಧಿಕಾರಿ ರವರು ಪ್ರಸ್ಥಾವನೆಯನ್ನು ಪರಿಶೀಲಿಸಿ 2017–18 ರ ಆಯವ್ಯಯದಲ್ಲಿನ ಲೆಕ್ಕ ಶೀರ್ಷಿಕೆ ಪಿ–3075 ಅಡಿ ಮುಂದುವರೆದ ಕಾಮಗಾರಿಗಳ ಅಡಿ ಅನುದಾನ ಮೀಸಲಿರಿಸಿರುವುದಿಲ್ಲ ಬಾಕಿ ಬಿಲ್ಲುಗಳ ಅಡಿ ಪಾವತಿಗಾಗಿ ರೂ.1000.00 ಲಕ್ಷಗಳ ಅನುದಾನ ಮೀಸಲಿರಿಸಿದೆ ಎಂದು ವರದಿಸುತ್ತಾ 2016–17ನೇ ಸಾಲಿನ ಪಿ–3075 ರಡಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ನೀಡಲಾದ ಜಾಬ್ ಕೋಡ್ 104–17–000056, 125-17-000039 & 125–17–000039 ರದ್ದುಗೊಳಿಸಿ 2016–17 ರ ಪಿ–3075 ರಡಿ ವಾರ್ಡ್ ಸಂಖ್ಯೆ:128 ರ 03 ಕಾಮಗಾರಿಗಳಿಗೆ ರೂ.350.00 ಲಕ್ಷಗಳಿಗೆ ಬದಲಿ ಜಾಬ್ ಸಂಖ್ಯೆ ನೀಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮ ವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2016–17 ನೇ ಸಾಲಿನ ಪಿ–3075 ರಡಿ ವಾರ್ಡ್ ಸಂಖ್ಯೆ:103, 104, 105, 106, 125, 126, 127, 128, & 131 ನೀಡಲಾದ ಜಾಬ್ ಕೋಡ್ 104–17–000056, 125-17-000039 & 125–17–000039 ರದ್ದುಗೊಳಿಸಿ 2016–17 ರ ಪಿ–3075 ರಡಿ ವಾರ್ಡ್ ಸಂಖ್ಯೆ:128 ರ 03 ಕಾಮಗಾರಿಗಳಿಗೆ ರೂ.350.00 ಲಕ್ಷಗಳಿಗೆ ಬದಲಿ ಜಾಬ್ ಸಂಖ್ಯೆ ನೀಡಲು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 14.02.2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ: ತೆಆಸ್ಥಾಸ/ 311 /2017–18*

ಆಯುಕ್ತರ ದಿನಾಂಕ: 06–03–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆ ಇಲಾಖೆ ಯಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:

ಹೆ.ನಿ.ನ.ಯೋ/ಜೆ.ಡಿ.(ಉ)/ಡಿಎಂ3/ಪಿಆರ್/320/2015-16 ದಿನಾಂಕ: 04-09-2015ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕಟ್ಟಡಗಳಿಗೆ ಪರವಾನಿಗೆ ನೀಡುವಾಗ ವಿಧಿಸುವ ನೆಲಬಾಡಿಗೆ ಶುಲ್ಕವನ್ನು ಸಂಬಂಧಿಸಿದ ಸ್ವತ್ತಿನ ಚಾಲ್ತಿ ಮಾರ್ಗಸೂಚಿದರಗಳಿಗೆ ಅನುಗುಣವಾಗಿ ಪಾವತಿಸಿಕೊಳ್ಳಲಾಗುತ್ತಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಡಿಮೆ ವಿಸ್ತೀರ್ಣದ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಕೈಗೊಳ್ಳುವಾಗ ನಿರ್ಮಾಣ ಸಾಮಗ್ರಿಗಳನ್ನು ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆಸಿಟ್ಟುಕೊಳ್ಳುವುದರಿಂದ ಪಾಲಿಕೆಯಿಂದ ನಿರ್ಮಿಸಲಾದ ರಸ್ತೆಗಳು, ಚರಂಡಿಗಳು ಹಾಗೂ ಮೋರಿಗಳಿಗೆ ಹಾನಿಯಾಗುವ ಪ್ರಮಾಣ ಜಾಸ್ತಿ ಇರುತ್ತದೆ. ಈ ಕಾರಣಗಳಿಂದಾಗಿ ಪಾಲಿಕೆಯಿಂದ ಸದರಿ ರಸ್ತೆಗಳು, ಚರಂಡಿಗಳು ಹಾಗೂ ಮೋರಿಗಳನ್ನು ಪುನರ್ ನಿರ್ಮಾಣ ಕಾಮಗಾರಿಗಳಿಗೆ ವ್ಯಯಿಸುತ್ತಿರುವ ವೆಚ್ಚಗಳೂ ಸಹ ಗಣನೀಯವಾಗಿ ಹೆಚ್ಚಾಗಿರುತ್ತದೆ. ಆದ ಕಾರಣ ಹಾಲಿ ಪಾವತಿಸಿಕೊಳ್ಳುತ್ತಿರುವ ನೆಲಬಾಡಿಗೆ ಶುಲ್ಕದ ದರಗಳನ್ನು ಹೆಚ್ಚಿಸುವುದು ಅವಶ್ಯಕವೆಂದು ತಿಳಿದು ಬಂದಿರುತ್ತದೆ.

ಈ ಮೇಲ್ಕಂಡ ಹಿನ್ನಲೆಯಲ್ಲಿ, 2018-19ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯ ಸಭೆಯಲ್ಲಿ ಚರ್ಚಿಸಿದಂತೆ, ಹಾಲಿ ಕಟ್ಟಡಗಳಿಗೆ ಪರವಾನಿಗೆ ನೀಡುವಾಗ ವಿಧಿಸುವ ನೆಲಬಾಡಿಗೆ ಶುಲ್ಕವನ್ನು ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರದೊಂದಿಗೆ ಹೆಚ್ಚುವರಿ ಶೇ.25%ಗಳನ್ನು ಪರಿಷ್ಕರಿಸಿ ನಿಗಧಿಪಡಿಸುವ ಬಗ್ಗೆ ಉದ್ದೇಶಿತ ಪರಿಷ್ಕೃತ ದರಗಳು ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿದೆ.

| ಕ್ರ. ಸಂ. | ಶುಲ್ಕಗಳ ವಿವರ | ಹಾಲಿ ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರಗಳಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚ.ಮೀ.ಗೆ (ಮಾರ್ಗಸೂಚಿದರದ ಶೇಕಡಾವಾರು ಪ್ರಮಾಣ) | | ಪ್ರಸ್ತಾಪಿತ ಹಾಲಿ ನಿವೇಶನ / ಸ್ವತ್ತಿಗೆ ಚಾಲ್ತಿಯಲ್ಲಿರುವ ಮಾರ್ಗಸೂಚಿದರಗಳಂತೆ ನಿವೇಶನದ ವಿಸ್ತೀರ್ಣ 1,000 ಚ.ಮೀ.ಗಳ ವರೆಗಿನ ನಿವೇಶನಗಳಲ್ಲಿ ನಿರ್ಮಿಸುವ ಕಟ್ಟಡಗಳಿಗೆ ಅನ್ವಯವಾಗುವಂತೆ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ದರ ಪ್ರತಿ ಚ.ಮೀ.ಗೆ (ಮಾರ್ಗಸೂಚಿದರದ ಶೇಕಡಾವಾರು ಪ್ರಮಾಣ) | |
|---|---|---|---|---|---|
| | | ವಸತಿ | ವಾಣಿಜ್ಯ | ವಸತಿ | ವಸತಿಯೇತರ (ವಾಣಿಜ್ಯ, ಇತ್ಯಾಧಿ) |
| 01 | ನೆಲ ಬಾಡಿಗೆ ಶುಲ್ಕ | 0.09% | 0.22% | 0.12% | 0.28% |
| ವಿ.ಸೂ:- ನೆಲಬಾಡಿಗೆ ಶುಲ್ಕ ದರಗಳನ್ನು ಲೆಕ್ಕಾಚಾರ ಮಾಡುವಾಗ ನಿವೇಶನದ ಮಾರ್ಗಸೂಚಿ ಬೆಲೆಯು ರೂ.50,000/-ಗಳಿಗಿಂತ ಕಡಿಮೆ ಇದ್ದಲ್ಲಿ ನೆಲಬಾಡಿಗೆ ಶುಲ್ಕ ಲೆಕ್ಕಾಚಾರಕ್ಕಾಗಿ ಕನಿಷ್ಠ ರೂ.50,000/-ಗಳನ್ನು ನಿವೇಶನದ ಮಾರ್ಗಸೂಚಿ ದರವಾಗಿ ಪರಿಗಣಿಸತಕ್ಕದ್ದು. | | | | | |

ಮೇಲ್ಕಂಡ ಪ್ರಸ್ತಾವನೆಯನ್ನು ಪಾಲಿಕೆಯ ತೆರಿಗೆ ಮತ್ತು ಸ್ಥಾಯಿ ಸಮಿತಿಯ ಅನುಮೋದನೆ ಕೋರಿ ಸಮಿತಿಯ ಮುಂದೆ ಮಂಡಿಸಲು ಕೋರಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ ವಿವರಗಳು ಈ ಕೆಳಕಂಡಂತಿರುತ್ತದೆ.

**-ಮುಂದೂಡಿದೆ-**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/ 312 /2017-18***

ಪ್ರಧಾನ ಅಭಿಯಂತರರ ದಿನಾಂಕ: 19-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2016-17 ಮತ್ತು 2017-18ನೇ ಸಾಲುಗಳಲ್ಲಿ ನಗರೋತ್ಥಾನ ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಡವಾಳ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ

ರೂ.7300.00 ಕೋಟಿಗಳ ಸರ್ಕಾರದ ಅನುದಾನದಲ್ಲಿ ಬೃಹತ್ ಮಳೆ ನೀರುಗಾಲುವೆ ವಿಭಾಗಕ್ಕೆ ಒಟ್ಟು ರೂ.800.00 ಕೋಟಿ ಅನುದಾನದ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನಅಇ 199 ಎಸ್‌ಎಫ್‌ಸಿ 2016 (ಭಾಗ–1) ದಿನಾಂಕ: 21–06–2016 ರ ಅನೇಕ್ಸರ್–7 ರಂತೆ ಅನುದಾನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಹೆಚ್ಚುವರಿಯಾಗಿ ಟೆಂಡರ್ ಪ್ರೀಮಿಯಂ ಮೊತ್ತವಾದ ರೂ. 986.98 ಕೋಟಿಗಳಿಗೆ ಸದರಿ ಘನ ಸರ್ಕಾರವು ಅನುಮೋದನೆ ನೀಡಿರುತ್ತದೆ. ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಪಟ್ಟಿಮಾಡಲಾಗಿದೆ.

| Sl No | Name of Zones projects /RI/SWD/Lakes SWD | ANNEXURE NO | Package Name | Estimated Cost | Tender Amount Sanctioned by HPC | Tender Amount of DPR & PMC | Total Amount (6+7) | Excess (8-5) |
|---|---|---|---|---|---|---|---|---|
| 1 | SWD | Action Plan for development of Storm Water Drain during years 2016-17 & 2017-18 under Gok Budget grants 2016-17 Vide Govt Order No.UDD 199 SFC 2016 (Part 1)Bengaluru Dated: 21-06-2016 A Capital Investment (Capital Support to Special Infrastructures Projects of Bengaluru Serial No 7 SWD ANNEXURE 7 RS.800 C | Package-1 **Remodelling of Primary and secondary storm water drains culverts bridges and allied works (33 nos Identified under BBMP SWD ACTION PLAN WORKS 2016-17 which are spread out at various locations of Yelahanka Byatarayanapura, Hebbal and Sarvagnanagara Constituencies, in Hebbal Valley East and Yelahanka Zones** PKG-SWD-No. 0-1 Hebbal Valley | 12857.00 | 15849.07 | 199.96 | 16049.03 | 3192.03 |
| 2 | SWD | | Package-2 **Remodelling of Primary and Secondary storm water drains culverts bridges and allied works (33 Nos) identified under BBMP SWD ACTION PLAN WORKS 2016-17 which are spread out at Various locations of K.R.Puram Constituencies in Hebbal Valley Mahadevapura Zone** PKG-SWD No-2 HebbalVally | 4530.00 | 5746.83 | 80.50 | 5827.33 | 1297.33 |
| 3 | SWD | | Package-3 **Remodelling of primary and secondary storm water drains, Culverts bridges and allied works (86 nos) Identified under BBMP SWD ACTION PLAN WORKS 2016-17 which are spread out at various locations of Koramangala valley and Challaghatta Valley East South Mahadevapura and Bommanahalli Zones of BBMP are Bengaluru Package** No.03 Koramangala and ChallagattaVelley | 15500.00 | 19132.09 | 294.61 | 19426.70 | 3926.70 |
| 4 | SWD | Action Plan for Development of Storm Water Drains during Years 2016-17 & 2017-18 under GOK Budget Grants 2016-17 Vide Govt Order No UDD 199 SFC 2016 (Part Bengaluru Dated: 21.06.2016 A Capital Investment (Capital Support to Special Infrastructures Projects of Bengaluru Serial No.7 SWD ANNEXURE 7 RS 800 Crore | Package-4 **Remodelling of primary and secondary storm water drains, culverts bridges and allied works (138 nos) Malleshwara Mahalakshmi Layout Vijayanagar Chamarajpete, Padmanabha nagara, Basavanagudi BTM Layout and Dasarahalli Vrishabhavathi Valley Wes South and Darashalli Zones of BBMP area Bengaluru** PKG SWD-No 04 Vrishabhavathi Valley | 17695.30 | 21924.41 | 302.00 | 22226.41 | 4531.11 |
| 5 | SWD | | **Package-5 Remodelling of Primary and secondary storm water drains, culverts bridges and allied works (39 nos identified under BBMP SWD ACTION PLAN WORKS 2016-17 Which are spread out at various location of Rajarajeshwarinagara Constituency in Vrishabhavathi Valley Rajarajeshwari Nagara zone of BBMP Area Bengaluru PKG-SWD No.05 VrishabavathiValley .** | 9500.00 | 11637.70 | 181.00 | 11818.70 | 2318.70 |
| 6 | SWD | | Package-6 **Remodelling of primary and secondary storm water drains, culverts bridges and allied works (2 nos Identified under BBMP SWD ACTION PLAN WORKS 2016-17 which are spread out at various locations of Yeshwanthapura Constituency in Vrishabhavathi Valley Rajarajeshwari Nagara zone of BBMP Area Bengaluru** PKG-SWD-No-6 Vrishabavathi Valley | 7100.00 | 8682.70 | 105.00 | 8787.70 | 1687.70 |
| 7 | SWD | | Maintenance works-19 Agencies | 2640.00 | 2654.28 | | 2654.28 | 14.28 |
| 8 | SWD | | Essential Emergency Works-30 Agencies | 10178.35 | 11908.07 | | 11908.07 | 1729.72 |
| | | | Total | 80000 | 97535 | 1163 | 98698 | 18698 |

ಮೇಲೆ ಪಟ್ಟಿಯಲ್ಲಿ ವಿವರಿಸಿರುವ ಮಾಹಿತಿಗಳಂತೆ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.800.00 ಕೋಟಿಗೆ ಅನುಮೋದಿಸಿರುವ ಟೆಂಡರ್‌ಗಳ ಒಟ್ಟು ಮೊತ್ತ ಹಾಗೂ ಡಿ.ಪಿ.ಆರ್ ಮತ್ತು ಪಿಎಂಸಿ ಗಳ ಮೊತ್ತವು ಸೇರಿದಂತೆ ಕಾಮಗಾರಿಯ ಒಟ್ಟು ಮೊತ್ತ ರೂ.986.98 ಕೋಟಿಗಳಿದ್ದು ಇದನ್ನು ಅಂದಾಜು ಪಟ್ಟಿಗೆ ತುಲನೆ ಮಾಡಿದ್ದಲ್ಲಿ ರೂ. 186.98 ಕೋಟಿಗಳು ಮೊತ್ತವು ಹೆಚ್ಚುವರಿಯಾಗಿರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ನಅಇ 199 ಎಸ್‌ಎಫ್‌ಸಿ 2016 (ಭಾಗ-1) ದಿನಾಂಕ: 21-06-2016ರ ಷರತ್ತಿನ ಸಂಖ್ಯೆ: 09ರಂತೆ ಈ ಆದೇಶದಲ್ಲಿ ಅನುಮೋದನೆ ನೀಡಿರುವ ಮೊತ್ತಕ್ಕಿಂತ ಕಾಮಗಾರಿಗಳ ಅನುಷ್ಠಾನ ಮೊತ್ತವು ಹೆಚ್ಚುವರಿಯಾದಲ್ಲಿ ಅನುದಾನವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು ಸರ್ಕಾರದಿಂದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗುವುದಿಲ್ಲ ಎಂದು ಆದೇಶಿಸಿರುವುದರಿಂದ ಹೆಚ್ಚುವರಿ ಮೊತ್ತ ರೂ.186.98 ಕೋಟಿಗಳನ್ನು 2017-18 ನೇ ಸಾಲಿನ ಆಯವ್ಯಯದಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಅಡಿಯಲ್ಲಿ ಹೆಚ್ಚುವರಿ ಮೊತ್ತದ ಅನುದಾನವನ್ನು ಮರುಹೊಂದಾಣಿಕೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯಂತೆ ಕ್ರಮವಹಿಸಬಹುದಾಗಿದೆ ಎಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ. ಮೇಲೆ ತಿಳಿಸಿರುವ ಕಾಮಾಗಾರಿಗಳ ಹೆಚ್ಚುವರಿ ಮೊತ್ತ ರೂ.186.98 ಕೋಟಿಗಳನ್ನು 2017-18-ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಸಂಬಂಧಪಟ್ಟ ಲೆಕ್ಕಶೀರ್ಷಿಕೆ ಅಡಿಯಲ್ಲಿ ಅನುಮೋದನೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

**-ಮುಂದೂಡಿದೆ-**

## ***06]. ವಿಷಯದ ಸಂಖ್ಯೆ: ತೆಆಸ್ಥಾಸ/ 314 /2017-18***

ಆಯುಕ್ತರ ದಿನಾಂಕ: 24-01-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರಿ ಸಾಬೂನು ಕಾರ್ಖಾನೆ ಜಂಕ್ಷನ್‌ನಿಂದ ಮಾಗಡಿ ರಸ್ತೆ ಡಿವಿಯೇಶನ್ ರಸ್ತೆ ಜಂಕ್ಷನ್‌ವರೆಗೆ ಡಾ|| ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣ ಮಾಡಲು ರೂ. 44.80 ಕೋಟಿ ಅಂದಾಜು ಪಟ್ಟಿಗೆ ಸರ್ಕಾರದ ಆದೇಶ ಸಂಖ್ಯೆ: No.UDD 356 MNY 2012/(1) Bangalore Dated:10-07-2012 ರಲ್ಲಿ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ನಿರ್ಮಾಣದ ಗುತ್ತಿಗೆಯನ್ನು ಮೆ||ಪಿ.ಜೆ.ಬಿ ಇಂಜಿನಿಯರ್ಸ್ ಪ್ರೈ. ಲೀ. ರವರಿಗೆ ದಿನಾಂಕ: 19-5-2014 ರಂದು ಕಾರ್ಯಾದೇಶ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿರುತ್ತದೆ.

ಈ ಯೋಜನೆಗೆ ಸಂಬಂಧಿಸಿದಂತೆ ಕೆಳಸೇತುವೆ ಪಕ್ಕದಲ್ಲಿ ಅಂದರೆ ಡಾ|| ರಾಜ್‌ಕುಮಾರ್ ರಸ್ತೆಯ ಪಶ್ಚಿಮ ಭಾಗದಲ್ಲಿ ವಾಹನಗಳ ಓಡಾಟಕ್ಕಾಗಿ ಹಾಲಿ ಇರುವ ರಸ್ತೆಯನ್ನು ವಿಸ್ತರಿಸಬೇಕಾಗಿದ್ದು, ಈ ಕಾಮಗಾರಿಗಾಗಿ ಪಾಲಿಕೆಯ ವಾರ್ಡ್ ಸಂಖ್ಯೆ:67 ರಲ್ಲಿ ಬರುವ ಖಾಸಗಿ ಸ್ವತ್ತು ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ಸಂಸ್ಥೆಯವರ ಸ್ವತ್ತಿನ ಪೈಕಿ ಸುಮಾರು 1011.61 ಚ.ಮೀ. ಅವಶ್ಯಕತೆ ಇರುತ್ತದೆ. ಸದರಿ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯಂತೆ ವಶಪಡಿಸಿಕೊಳ್ಳಲು ಹೆಚ್ಚಿನ ಕಾಲಾವಧಿ ಬೇಕಾಗಿರುವುದರಿಂದ ಹಾಗೂ ಯೋಜನೆಯ ಪ್ರಗತಿಗೂ ಸಹ ತೊಡಕು ಉಂಟಾಗಿರುವುದರಿಂದ ಸದರಿ ಸ್ವತ್ತನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರಂತೆ ನೇರ ಖರೀದಿಯ ಮುಖಾಂತರ ಖರೀದಿಸಲು ಸ್ವತ್ತಿನ ಮಾಲೀಕರ ನಡುವೆ ದರಸಂಧಾನವನ್ನು ನಡೆಸಿ ಸದರಿ ಭೂಮಿಯನ್ನು ಖರೀದಿಸಲು ಕ್ರಮ ಜರುಗಿಸಲಾಗಿರುತ್ತದೆ. ಅದರಂತೆ ಕೇಂದ್ರ ಕಛೇರಿಯ ದರ ಸಂಧಾನ ಸಮಿತಿ ಅಧ್ಯಕ್ಷರಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅಧ್ಯಕ್ಷತೆಯಲ್ಲಿ ದಿನಾಂಕ:27-8-2016 ರಂದು ಏರ್ಪಡಿಸಿದ ಸಭೆಯಲ್ಲಿ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರೊಂದಿಗೆ ಸಂಧಾನ ನಡೆಸಿ ದರ ಸಂಧಾನ ಸಮಿತಿಯ ಸಭೆಯ ತೀರ್ಮಾನದಂತೆ ಸದರಿ ಪ್ರದೇಶದ 2016ನೇ ಸಾಲಿನ ಮಾರ್ಗಸೂಚಿ ದರ ಬೆಲೆ ರೂ.96900/- ಪ್ರತಿ

ಚ.ಮೀ. ಇದ್ದು ಶೇಕಡ 20% ಹೆಚ್ಚು ಅಂದರೆ ಪ್ರತಿ ಚ.ಮೀ.ಗೆ ರೂ.96900+19380=1,16,280/- ರಂತೆ 1011.61 ಚ. ಮೀ.ಗೆ ಬೆಲೆ ಒಟ್ಟು ಮೊತ್ತ ರೂ.11,76,30,011/- ಗಳನ್ನು ಪಾವತಿಸಲು ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯು ಕಾರ್ಯಪಾಲಕ ಅಭಿಯಂತರರು (ಯೋಜನೆ ಕೇಂದ್ರ-3) ಹಾಗೂ ಮುಖ್ಯ ಅಭಿಯಂತರರು (ಯೋಜನೆ ಕೇಂದ್ರ) ರವರ ಮುಖೇನ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

**ಸ್ವತ್ತಿನ ವಿವರ.**

| ಕ್ರ. ಸಂ. | ಸರ್ವೆ ನಂ. | ಖಾತೆದಾರರು/ ಅನುಭವದಾರರ ಹೆಸರು | ಸಿಗ್ನಲ್ ಮುಕ್ತ ಕಾರಿಡಾರ್ ನಿರ್ಮಾಣಕ್ಕಾಗಿ ಬೇಕಾಗಿರುವ ವಿಸ್ತೀರ್ಣ (ಚ.ಮೀ) | ಮಾರ್ಗಸೂಚಿ ದರ ಬೆಲೆ ರೂ. (ಪ್ರತಿ ಚ.ಮೀ.ಗೆ) | ದರ ಸಂಧಾನ ಸಮಿತಿಯು ಅನುಮೋದಿಸಿದ ಪರಿಹಾರದ ಮೊತ್ತ ರೂ. |
|---|---|---|---|---|---|
| **1** | **180** | ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ (ಸಂಸ್ಥೆ) | 1011.61 ಚ.ಮೀ | 96900/- | 1011.61X96900=9,80,25,009+20% ಹೆಚ್ಚಿನ ಪರಿಹಾರ ರೂ.11,76,30,011 |
| | | | | | **ಒಟ್ಟು 21,56,55,020/-** |

ಈ ಹಿನ್ನಲೆಯಲ್ಲಿ ದಿನಾಂಕ: 27-8-2016 ರಲ್ಲಿನ ದರ ಸಂಧಾನ ಸಭೆಯ ತೀರ್ಮಾನದಂತೆ ಸೆಂಟ್ ಮೆರೀಸ್ ಇಮ್ಯಾಕ್ಯೂಲೇಟ್ ರವರ ಸ್ವತ್ತಿನ ಭಾಗವಾದ 1011.61 ಚ.ಮೀ. ವಿಸ್ತೀರ್ಣದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ರೂ.21,56,55,020/-ಗಳ ಮೊತ್ತದ ಪಾವತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿ ದಿನಾಂಕ: 9-1-2017 ರಲ್ಲಿನ ವಿಷಯದ ಸಂಖ್ಯೆ:ತೆಆಸ್ಥಾಸ/116/2016-17 ರಲ್ಲಿ ಮರು ಹೊಂದಾಣಿಕೆ ಮಾಡಲು ತೀರ್ಮಾನಿಸಿರುವಂತೆ ಹಾಗೂ ಸದರಿ ಜಮೀನನ್ನು ಕೆ.ಎಂ.ಸಿ ಕಾಯ್ದೆ 1976 ರ ಕಲಂ 175 ರ ರೀತ್ಯ ಕೈಗೊಂಡ ಸಭೆಯ ತೀರ್ಮಾನದಂತೆ ಭೂಪರಿಹಾರದ ಮೊತ್ತವನ್ನು ಪಾವತಿಸುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಾಮಾನ್ಯ ಸಭೆಯ ಮುಂದೆ ಮಂಡಿಸಿರುವ **ದಿನಾಂಕ: 24-01-2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 14.03.2018ರ ಸಭೆಯ ನಿರ್ಣಯ.**

**ನಿರ್ಣಯ: ಪ್ರಸ್ತಾಪಿತ ವಿಷಯದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ ಭೂಪರಿಹಾರ ಮೊತ್ತವು ಇನ್ನೂ ಕಡಿಮೆಯಾಗುವ ಸಾಧ್ಯತೆಗಳು ಇರುವುದೆಂದು ತಿಳಿಸಿರುವ ಹಿನ್ನಲೆಯಲ್ಲಿ ನಿಯಮಾನುಸಾರ ಪರಿಶೀಲಿಸಿ ಪುನರ್ ಮಂಡಿಸಲು ಕಡತವನ್ನು ಹಿಂದಿರುಗಿಸಲಾಗಿದೆ.**

## *08]. ವಿಷಯದ ಸಂಖ್ಯೆ: ತೆಆಸ್ಥಾಸ/ 15 /2018-19*

ಆಯುಕ್ತರ ದಿನಾಂಕ: 23-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಅಭಿಯಂತರರು (ಪೂರ್ವ) ರವರು 2016-17ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0975 (const and impts to edu bldg water and electrical connections to school /lib/R.room) ರಡಿಯಲ್ಲಿ ಪೂರ್ವ ವಲಯದ ಹೆಚ್.ಬಿ.ಆರ್. ಲೇಔಟ್, ವಾರ್ಡ್-24 ರ ವ್ಯಾಪ್ತಿಯಲ್ಲಿ ಪ್ರಸ್ತಾಪಿತ 02 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತವಾದ ರೂ:300.00 ಲಕ್ಷಗಳಿಗೆ ಜಾಬ್ ಕೋಡ್ ನೀಡಲು ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರರು (ಪೂರ್ವ) ರವರು ಸಲ್ಲಿಸಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸ | ಕಾಮಗಾರಿ ವಿವರ | ಅಂದಾಜು ಮೊತ್ತ ರೂ ಲಕ್ಷಗಳಲ್ಲಿ |
|---|---|---|
| 1 | Construction of Urdu school in ward No.24 Block-1 | 150.00 |
| 2 | Construction of urdu school in ward No.24 Block-2 (Estimated cost Rs.150.00 lakhs) | 150.00 |

ಸದರಿ ಪ್ರಸ್ತಾವನೆಯ ಬಗ್ಗೆ ಮುಖ್ಯ ಲೆಕ್ಕಾಧಿಕಾರಿಗಳು ಅಭಿಪ್ರಾಯಿಸಿರುವಂತೆ, ಪ್ರಸ್ತುತ ಸಾಲಿನ 2017–18ನೇ ಸಾಲಿನ ಆಯವ್ಯಯದಲ್ಲಿ ಒಟ್ಟಾರೆ ಉಳಿತಾಯವಾಗುವ ಅನುದಾನದಲ್ಲಿ 31–03–2018ರ ಅಂತ್ಯಕ್ಕೆ ಸಂಭಾವನೀಯ ವೆಚ್ಚ ರೂ:50.00 ಲಕ್ಷ ಎಂದು ಪರಿಗಣಿಸಿ, ಲಭ್ಯ ಅನುದಾನದಲ್ಲಿ ಮರು ಹೊಂದಾಣಿಕೆ ಅಥವಾ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳುವ ನಿಬಂಧನೆ ಮೇರೆಗೆ ಸಕ್ಷಮ ಪ್ರಾಧಿಕಾರವಾದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಮುಂದಿನ ಕ್ರಮ ವಹಿಸಬಹುದಾಗಿದೆ ಮತ್ತು ಬಾಕಿ ಅನುದಾನವನ್ನು 2018–19ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸಬಹುದಾಗಿದೆ ಎಂದು ಅಭಿಪ್ರಾಯಿಸಿದಂತೆ, ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳೂ 2018–19ನೇ ಸಾಲಿನ ಆಯವ್ಯಯದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 2018–19ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಾಣಿಸಿದ 02 ಕಾಮಗಾರಿಗಳಿಗೆ ಈ ಕೆಳಕಂಡಂತೆ ಜಾಬ್ ಸಂಖ್ಯೆಯನ್ನು ನೀಡಲಾಗಿದೆ.

| ಕ್ರ.ಸ | ಕಾಮಗಾರಿ ವಿವರ | ಅಂದಾಜು ಮೊತ್ತ ರೂ ಲಕ್ಷಗಳಲ್ಲಿ | ಜಾಬ್ ಸಂಖ್ಯೆ |
|---|---|---|---|
| 1 | Construction of Urdu school in ward No.24 Block-1 (estimated cost Rs.150.00 lakhs | 25.00 | 024-18-000056 |
| 2 | Construction of urdu school in ward No.24 Block-2 (Estimated cost Rs.150.00 lakhs) | 25.00 | 024-18-000057 |

ಈ ಮೇಲ್ಕಾಣಿಸಿದ ಕಾಮಾಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಟ್ಟು ನಿರ್ವಹಿಸಲು ಸನ್ಮಾನ್ಯ ಶ್ರೀ.ಕೆ.ಜೆ.ಜಾರ್ಜ್, ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರು ಮತ್ತು ಬೆಂಗಳೂರು ಜಿಲ್ಲಾ ಉಸ್ತುವಾರಿ ಸಚಿವರು ರವರು ಪತ್ರ ನೀಡಿದ್ದು, ಹಾಗೂ ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಆಇ/262/ವೆಚ್ಚ–12/17, ದಿನಾಂಕ:22–04–2017 ರಲ್ಲಿ ಸಂಸ್ಥೆಯ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್– ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ:01–04–2017 ರಿಂದ ಒಂದು ವರ್ಷದ ಅವಧಿಗೆ ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಿದೆ.

ಈ ಹಿನ್ನಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶದಂತೆ, ಮೇಲ್ಕಾಣಿಸಿದ 02 ಕಾಮಗಾರಿಗಳನ್ನು 2018–19ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಹಾಗೂ ಸಕ್ಷಮ ಪ್ರಾಧಿಕಾರವಾದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು ವಾರ್ಡ್–24 ರಲ್ಲಿ ಪ್ರಸ್ತಾಪಿತ 02 ಕಾಮಗಾರಿಗಳ ಪ್ರತ್ಯೇಕ ಅಂದಾಜು ಮೊತ್ತವಾದ ರೂ: 150.00 ಲಕ್ಷಗಳ 02 ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್ ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಹಾಗೂ ಮೇಲ್ಕಾಣಿಸಿದ 02 ಕಾಮಗಾರಿಗಳ ಪ್ರತ್ಯೇಕ ಅಂದಾಜು ಮೊತ್ತವಾದ ರೂ: 150.00 ಲಕ್ಷಗಳ ಕ್ರಿಯಾ ಯೋಜನೆ ಮತ್ತು ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:

ಪಿ.ಎಸ್.ಆರ್.(ಜಿ)8734/2017-18, ದಿನಾಂಕ: 14.03.2018 ರಂತೆ ಅನುಮೋದಿಸಿರುವ ಮೇರೆಗೆ ಪ್ರಧಾನ ಅಭಿಯಂತರರ ಕಚೇರಿ ಸಂಖ್ಯೆ:13238/2017-18 ದಿನಾಂಕ: 22-03-2018 ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ **ಪ್ರಧಾನ ಅಭಿಯಂತರರು ರವರ ದಿನಾಂಕ: 23-03-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳಿಗೆ ಅನುದಾನ ಲಭ್ಯತೆಯ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸುವುದೆಂದು ತೀರ್ಮಾನಿಸಿರುವ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 20.06.2018 ರ ಸಭೆಯ ನಿರ್ಣಯ.**

**-ಮುಂದೂಡಿದೆ-**

***08]. ವಿಷಯದ ಸಂಖ್ಯೆ: ತೆಆಸ್ಥಾಸ/ 16 /2018-19***

ಆಯುಕ್ತರ ದಿನಾಂಕ: 04-08-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಸರ್ಕಾರದ ಆದೇಶದಲ್ಲಿ ರಾಜ್ಯ ಸರ್ಕಾರಿ ನೌಕರರುಗಳಿಗೆ 2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ 1ನೇ ಜನವರಿ 2018 ರಿಂದ ಜಾರಿಗೆ ಬರುವಂತೆ ತುಟ್ಟಿ ಭತ್ಯೆಯನ್ನು ಮೂಲ ವೇತನದ ಶೇಕಡ 1.75 ರಷ್ಟು ಮಂಜೂರು ಮಾಡಲಾಗಿರುತ್ತದೆ ಹಾಗೂ ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು / ಕುಟುಂಬ ನಿವೃತ್ತಿ ವೇತನದಾರರಿಗೆ ಕೂಡ ತುಟ್ಟಿಭತ್ಯೆಯನ್ನು ದಿನಾಂಕ 1ನೇ ಜನವರಿ 2018 ರಿಂದ ಜಾರಿಗೆ ಬರುವಂತೆ ಅವರ ಮೂಲ ಪಿಂಚಣಿ / ಕುಟುಂಬ ಪಿಂಚಣಿಯ ಶೇಕಡ 1.75 ರಷ್ಟು ತುಟ್ಟಿಭತ್ಯೆಯನ್ನು ಮಂಜೂರು ಮಾಡಲಾಗಿರುತ್ತದೆ.

ಈ ಹಿಂದೆ ಸರ್ಕಾರವು ತುಟ್ಟಿಭತ್ಯೆಯನ್ನು ಹೆಚ್ಚಿಸಿರುವ ಆದೇಶವನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ಸಂಬಂಧಿಸಿದಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ: ತೆಆಸ್ಥಾಸ/05/2014-15ರಲ್ಲಿ ದಿನಾಂಕ: 02-11-2015 ರಂದು ಈ ಕೆಳಕಂಡಂತೆ ನಿರ್ಣಯವನ್ನು ತೆಗೆದುಕೊಳ್ಳಲಾಗಿರುತ್ತದೆ.

**"ಸರ್ಕಾರಿ ಆದೇಶದ ಅನುಸಾರ ಕಾಲಕಾಲಕ್ಕೆ ತುಟ್ಟಿಭತ್ಯೆಯನ್ನು ಪಾವತಿಸುವುದು ಕಡ್ಡಾಯವಾಗಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಖಾಯಂ ನೌಕರರಿಗೆ ಮತ್ತು ಪಿಂಚಣಿದಾರರಿಗೆ ಅನ್ವಯವಾಗುವಂತೆ ಅಳವಡಿಸಿಕೊಂಡು ಪಾವತಿಸುವುದು ಹಾಗೂ ಇನ್ನು ಮುಂದೆ ಕಾಲಕಾಲಕ್ಕೆ ಸರ್ಕಾರದ ಆದೇಶದನ್ವಯ ನೀಡಲಾಗುವ ತುಟ್ಟಿಭತ್ಯೆಯನ್ನು ಪಾಲಿಕೆಯಲ್ಲಿ ಅಳವಡಿಸಿಕೊಂಡು ಪಾವತಿಸಿದ ನಂತರ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು"** ತೀರ್ಮಾನಿಸಲಾಗಿರುತ್ತದೆ.

ಇದರಂತೆ, ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 12 ಎಸ್‌ಆರ್‌ಪಿ 2018, ದಿನಾಂಕ: 18-06-2018ನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ. ಸದರಿ ಆದೇಶದ ದಾಖಲಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 04.08.2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***09]. ವಿಷಯದ ಸಂಖ್ಯೆ: ತೆಆಸ್ಥಾಸ/ 17 /2018–19***

ಆಯುಕ್ತರ ದಿನಾಂಕ: 16–07–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ:144, ಸಿದ್ದಾಪುರ, 1ನೇ ಬ್ಲಾಕ್, ಜಯನಗರ, ಲಾಲ್‌ಬಾಗ್ ಸಿದ್ದಾಪುರ ಮುಖ್ಯರಸ್ತೆಯ (ಅಶೋಕ ಪಿಲ್ಲರ್ ರಸ್ತೆ) ಪಾದಚಾರಿ ಪಕ್ಕದಲ್ಲಿರುವ ಪಾಲಿಕೆಯ 15*15 ಅಡಿಗಳ ಜಾಗವನ್ನು ಶ್ರೀಮತಿ.ಕವಿತಾ.ಕೆ ರವರಿಗೆ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಲು ಜಾಗವನ್ನು ಮಂಜೂರು/ಗುತ್ತಿಗೆ ಆಧಾರದ ಮೇಲೆ ನೀಡಲು ಕೋರಿರುತ್ತಾರೆ. ಆಸ್ತಿ ವಹಿ ಸಂಖ್ಯೆ (ಹಳೆದು–36) ಪುಟ ಸಂಖ್ಯೆ:24 ರಲ್ಲಿ ದಾಖಲಿರುವಂತೆ "Sketch Showing the location & School Building lalbagh Siddapura in dn- 54" ಎಂದು ದಾಖಲಾಗಿರುತ್ತದೆ. ಈ ಪೈಕಿ ಅರ್ಜಿದಾರರಾದ ಶ್ರೀಮತಿ.ಕವಿತಾ.ಕೆ ರವರು ಕಂಡಿಕೆ (15) ಮತ್ತು (16) ರಲ್ಲಿ ಪ್ರಸ್ತಾಪಿಸಿರುವಂತೆ ನಂದಿನಿ ಪಾರ್ಲರ್ (ಡೈರಿ ಉತ್ಪನ್ನ ಮಾರಾಟ ಮಾಡಲು) ನಡೆಸಲು 15x15 ಅಡಿಗಳ ಜಾಗವನ್ನು ಗುತ್ತಿಗೆಗೆ ನೀಡುವಂತೆ ಕೋರಿರುತ್ತಾರೆ. ಆದರೆ, ಪಾಲಿಕೆಯ ಆಸ್ತಿಯನ್ನು ಗುತ್ತಿಗೆ/ಕ್ರಯಕ್ಕೆ ನೀಡಬೇಕಾದಲ್ಲಿ ಸರ್ಕಾರದ ಆದೇಶಗಳು, ಸುತ್ತೋಲೆಗಳು ಹಾಗೂ ಪಾಲಿಕೆಯಲ್ಲಿ ಅಳವಡಿಸಿಕೊಂಡಿರುವ ನಿಯಮಗಳು ಈ ಕೆಳಕಂಡ ಕಾಯ್ದೆ ಅನ್ವಯ ಕ್ರಮವಹಿಸಬೇಕಾಗಿರುತ್ತದೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, 5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02–06–2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪಾಲಿಕೆಯ ಕೆ.ಎಂ.ಸಿ.ಕಾಯ್ದೆ 1976 ರ ನಿಯಮ 176 (6) ರಂತೆ Not with standing anything contained in this Act —

No movable property exceeding such sum in value as may be prescribed shall be sold otherwise than by public auction;

No property whether movable or immovable of whatever value shall be transferred free of cost or for an upset price;

no lease of any immovable property exceeding five years shall be granted;

no immovable property shall be disposed of by sale or by other transfer;

Except with the previous sanction of the Government. ಎಂದಿರುತ್ತದೆ.

ಪ್ರಸ್ತಾಪಿತ ಸ್ವತ್ತಿನ ಅಳತೆಯು 15x15=225 ಚದರಡಿಗಳಾಗಿದ್ದು, ಪ್ರಸಕ್ತ ಮಾರುಕಟ್ಟೆ ದರವು (2017–18) ಚದರ ಮೀಟರ್ 1ಕ್ಕೆ ರೂ.19000/– ಗಳಾಗಿದ್ದು, ಚದರಡಿ 1ಕ್ಕೆ ರೂ.1765/– ಗಳಾಗಿದ್ದು, ಸ್ವತ್ತಿನ ಮೌಲ್ಯ 225x1765=3,97,125/– ಗಳಾಗುತ್ತದೆ. ವಾಣಿಜ್ಯಕ್ಕೆ ಶೇ40% ರಷ್ಟು ಹೆಚ್ಚಿಸಿದಲ್ಲಿ ರೂ.3,97,125+1,58,850 = 5,55,975/– ಸ್ವತ್ತಿನ ಒಟ್ಟು ಮೌಲ್ಯ ರೂ.5,55,975/– ಗಳಾಗುತ್ತದೆ. ಸ್ವತ್ತಿನ ಮೌಲ್ಯ ಶೇ 10% ರಂತೆ ಪರಿಗಣಿಸಿದಾಗ ವಾರ್ಷಿಕ ರೂ.55,598/–ಗಳು ಮಾಸಿಕ ರೂ.4633/–ಗಳನ್ನು ನಿಗಧಿಪಡಿಸಬಹುದಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ.ಕವಿತಾ.ಕೆ ರವರಿಗೆ ನಂದಿನಿ ಹಾಲಿನ ಕೇಂದ್ರವನ್ನು ತೆರೆಯಲು ಪಾಲಿಕೆಯ ಜಾಗವನ್ನು ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ ದಿನಾಂಕ: 16-07-2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, 10*10ರ ಜಾಗವನ್ನು ನಂದಿನಿ ಹಾಲಿನ ಕೇಂದ್ರ ತೆರೆಯಲು ಗುತ್ತಿಗೆಗೆ ನೀಡವಂತೆ ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 10-8-2018ರ ಸಭೆಯ ನಿರ್ಣಯ.

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, 3 (ಮೂರು) ವರ್ಷಗಳ ಅವಧಿಗೆ 10*10 ಅಡಿಗಳ ಜಾಗಕ್ಕೆ ಮಾತ್ರ ನಿಯಮಾನುಸಾರ ಮಾರುಕಟ್ಟೆ ದರವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ***10]. ವಿಷಯದ ಸಂಖ್ಯೆ: ತೆಆಸ್ಥಾಸ/ 18 /2018-19***

ಆಯುಕ್ತರ ದಿನಾಂಕ: 06-02-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ದಕ್ಷಿಣ) ರವರು ಕಂಡಿಕೆ (49) ರಲ್ಲಿ ವಿಜಯನಗರ ವಿಭಾಗದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ: 132 ರಲ್ಲಿ ಬುಲೆವಾರ್ಡ್ ಉದ್ಯಾನವನ ಮತ್ತು ಮೆಟ್ರೋ ಸ್ಟೇಷನ್, ಅತ್ತಿಗುಪ್ಪೆ ಈ ಮಧ್ಯದಲ್ಲಿರುವ ಖಾಲಿ ಸ್ಥಳದ ವಿಸ್ತೀರ್ಣ 9.30x23.30ಮೀ ಜಾಗವನ್ನು ಸಾರ್ವಜನಿಕರಿಗೆ ದ್ವಿ-ಚಕ್ರ ವಾಹನ ನಿಲ್ಲಿಸಲು ವ್ಯವಸ್ಥೆಯನ್ನು ಕಲ್ಪಿಸಲು ಈ ಖಾಲಿ ಜಾಗದಲ್ಲಿ ಅಗತ್ಯವಿರುವ ಕಾರ್ಯಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ರೂ. 14.25 ಲಕ್ಷಗಳಾಗುತ್ತದೆಂದು ವರದಿಸಿದ್ದು, ಈ ಎಲ್ಲಾ ಕಾರ್ಯಗಳನ್ನು ಶ್ರೀ ವೆಂಕಟೇಶ್, ಮೆ॥ ಎಸ್‌ಎಲ್‌ಎನ್ ಎಂಟರ್‌ಪ್ರೈಸಸ್, ಬೆಂಗಳೂರು ರವರು ಸ್ವಂತ ಖರ್ಚಿನಲ್ಲಿ ಸಂಪೂರ್ಣ ವ್ಯವಸ್ಥೆಯನ್ನು ಕಲ್ಪಿಸಿ ತದನಂತರ ಪ್ರಸ್ಥಾಪಿತ ಜಾಗದಲ್ಲಿ 50 ದ್ವಿಚಕ್ರ ವಾಹನಗಳನ್ನು ನಿಲ್ಲಿಸಬಹುದಾಗಿದ್ದು, ಪ್ರತಿ ವಾಹನಕ್ಕೆ ರೂ. 20.00ರಂತೆ ವಾರ್ಷಿಕ ರೂ. 3,65,000.00 ಆದಾಯ ಬರುತ್ತದೆ, ನಿರ್ವಹಣೆ ವೆಚ್ಚವನ್ನು ಕಳೆದು ಸುಮಾರು ರೂ. 2,83,500.00 ಉಳಿತಾಯವಾಗುತ್ತದೆಂದು ಅಂದಾಜಿಸಿ ಅಂತಿಮವಾಗಿ ಪಾಲಿಕೆಗೆ ಪ್ರತಿ ವರ್ಷ ರೂ. 50,000.00 ಗಳ ಮೊತ್ತವನ್ನು 5 (ಐದು) ವರ್ಷಗಳ ಕಾಲಾವಧಿಗೆ ಪಾವತಿಸುವುದಾಗಿ ಪ್ರಸ್ಥಾವನೆಯನ್ನು ಸಲ್ಲಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಾಗವನ್ನು ಕೆ.ಎಂ.ಸಿ ಕಾಯ್ದೆ 1976 ಸೆಕ್ಷನ್. 176 (6) ರಲ್ಲಿ ಇರುವ ಅಂಶಗಳನ್ನು ಒಳಪಡಿಸಿದಂತೆ ಮತ್ತು 05 ವರ್ಷಗಳ ಅವಧಿಗೆ ಮೀರದಂತೆ ಭೋಗ್ಯಕ್ಕೆ ನೀಡುವ ಸಂಬಂಧ ಸಮಿತಿಯಿಂದ ಮತ್ತು ಪಾಲಿಕೆಯ ಕೌನ್ಸಿಲ್‌ನಿಂದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ವಿಶೇಷ ಆಯುಕ್ತರು (ಯೋಜನೆ) ರವರ ಶಿಫಾರಸ್ಸಿನಂತೆ ಹಾಗೂ ಮಾನ್ಯ ಆಯುಕ್ತರವರ ಆದೇಶಿಸಿದಂತೆ ವಾರ್ಡ್ ಸಂಖ್ಯೆ: 132 ರಲ್ಲಿ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಮಂಡಿಸಲಾದ **ಪ್ರಧಾನ ಅಭಿಯಂತರರು (ಪ್ರಭಾರ) ರವರ ದಿನಾಂಕ: 06-02-2018ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 24-03-2018ರ ಸಭೆಯ ನಿರ್ಣಯ.**

**ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 06.02.2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***11]. ವಿಷಯದ ಸಂಖ್ಯೆ: ತೆಲಸ್ಥಾಸ/ 19 /2018-19***

ಆಯುಕ್ತರ ದಿನಾಂಕ: 16-07-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ:154, ಬಸವನಗುಡಿ ವ್ಯಾಪ್ತಿಯಲ್ಲಿ ಬರುವ ಶ್ರೀ. ಬಾಲಾಜಿ ಬಲಿಜ ಸಂಘ (ರಿ.,) ರವರು ಮನವಿಯನ್ನು ಸಲ್ಲಿಸಿ ಎನ್.ಆರ್. ಕಾಲೋನಿ, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿರುವ ಅಂಚೆ ಕಛೇರಿ ಕಟ್ಟಡದ ಮೇಲೆ ಇವರು ಸ್ವಂತ ಖರ್ಚಿನಲ್ಲಿ ಕಟ್ಟಡ ನಿರ್ಮಿಸಿಕೊಂಡು ಸಂಘದ ಚಟುವಟಿಕೆಗಳಿಗಾಗಿ ಉಪಯೋಗಿಸಿಕೊಳ್ಳಲು ಧೀರ್ಘ ಕಾಲದ ಗುತ್ತಿಗೆ ನೀಡುವಂತೆ ಮನವಿ ಮಾಡಿರುತ್ತಾರೆ. ಸದರಿ ಪ್ರಸ್ತಾವನೆಗೆ ಸ್ಥಳೀಯ ಶಾಸಕರಾದ ಮಾನ್ಯ ಶ್ರೀ ಎಲ್.ಎ. ರವಿಸುಬ್ರಮಣ್ಯ ರವರು ಕೂಡ ಪತ್ರದ ಮೂಲಕ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಜಾಗವು ಪಾಲಿಕೆಯ ಆಸ್ತಿ ವಹಿಗಳನ್ನು ಪರಿಶೀಲಿಸಲಾಗಿ ಹೊಸ ಪುಸ್ತಕ ಸಂಖ್ಯೆ:32, ಪುಟ ಸಂಖ್ಯೆ:36 ರಲ್ಲಿ ಪಾಲಿಕೆಯ ಆಸ್ತಿಯೆಂದು ದಾಖಲಿಸಿದ್ದು, ಸದರಿ ಸ್ವತ್ತಿನ ಒಂದು ಬದಿಯಲ್ಲಿ ಅಂಚೆ ಕಛೇರಿ ಎಂದು ನಕ್ಷೆಯಲ್ಲಿ ದಾಖಲಿರುವ ಜಾಗವಾಗಿರುತ್ತದೆ ಎಂದು ಆಸ್ತಿ ವಿಭಾಗದವರು ಕಂಡಿಕೆ (22) ರಲ್ಲಿ ವರದಿ ಮಾಡಿರುತ್ತಾರೆ.

ಕಂಡಿಕೆ (11) ರಲ್ಲಿ ವರದಿ ಮಾಡಿರುವಂತೆ ಕಟ್ಟಡವನ್ನು ಪರಿಶೀಲಿಸಿ, ಮೇಲ್ನೋಟಕ್ಕೆ ಕಟ್ಟಡವು ಗಟ್ಟಿಯಾಗಿದ್ದು, ಇದರ ಮೇಲೆ ಮೊದಲನೇ ಮಹಡಿಯನ್ನು ಕಟ್ಟುವುದರಿಂದ ಕಟ್ಟಡಕ್ಕೆ ಯಾವುದೇ ಹಾನಿಯಾಗುವುದಿಲ್ಲ ಎಂಬ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರು ಯೋಜನೆ (ದಕ್ಷಿಣ) ರವರು ಅಭಿಪ್ರಾಯ ನೀಡಿರುತ್ತಾರೆ.

1. ಕರ್ನಾಟಕ ಮುನಿಸಿಪಲ್ ಕಾಯ್ದೆ 1976ರ ಕಲಂ 176 ಹಾಗೂ 176ರ (6) ಹಾಗೂ (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ, 3 ವರ್ಷಗಳವರೆಗೂ ಗುತ್ತಿಗೆ ನೀಡುವ ಅಧಿಕಾರವು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ,5 ವರ್ಷದವರೆಗೂ ಗುತ್ತಿಗೆ ನೀಡುವ ಅಧಿಕಾರವು ಮಹಾನಗರ ಪಾಲಿಕೆಯ ಸಭೆಗೆ ಇರುತ್ತದೆ, ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಘನ ಸರ್ಕಾರಕ್ಕೆ ಅಧಿಕಾರವಿರುತ್ತದೆ.
2. **ಘನ ಸರ್ಕಾರವು ಆದೇಶ ಸಂಖ್ಯೆ: ನಅಇ 129 ಟಿ.ಎಂ.ಡಿ 2002 ದಿನಾಂಕ:02-06-2003 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ /ಕ್ರಯ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮುಖಾಂತರವೇ ನೀಡುವುದು ಎಂದು ಆದೇಶಿಸಿರುತ್ತದೆ.**

ಪ್ರಸ್ತುತ ಸರ್ಕಾರಿ ಮಾರುಕಟ್ಟೆಯ ದರವನ್ನು ಪರಿಶೀಲಿಸಲಾಗಿ, ಚದರ ಮೀಟರ್ 1ಕ್ಕೆ ರೂ.56,800/- ಗಳಾಗಿದ್ದು, ಚದರಡಿಗೆ ರೂ.5277/- ಗಳಾಗಲಿವೆ. ಇದಕ್ಕೆ ಶೇ 10% ರಷ್ಟನ್ನು ಹೆಚ್ಚಿಸಿದಲ್ಲಿ ರೂ.5804/- ಗಳಾಗಲಿದ್ದು, ವಾರ್ಷಿಕ (5804*10) ರೂ.58040/- ಗಳು ಮಾಸಿಕ ಬಾಡಿಗೆ ರೂ.4837/- ಗಳಾಗಲಿವೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ವಾರ್ಡ್ ನಂ:154, ಬಸವನಗುಡಿ ಎನ್.ಆರ್.ಕಾಲೋನಿ, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆಯಲ್ಲಿರುವ ಅಂಚೆ ಕಛೇರಿ ಕಟ್ಟಡದ ಮೇಲ್ಭಾಗದಲ್ಲಿ ಸ್ವಂತ ಖರ್ಚಿನಲ್ಲಿ ಕಟ್ಟಡವನ್ನು ನಿರ್ಮಿಸಿಕೊಂಡು, ಸಂಘದ ಸಾಮಾಜಿಕ ಕಾರ್ಯಚಟುವಟಿಕೆಗಳನ್ನು ನಡೆಸಲು ಹಾಗೂ ಮಾನ್ಯ ಸ್ಥಳೀಯ ಕ್ಷೇತ್ರದ ಶಾಸಕರ ಮನವಿಯಂತೆ ಶ್ರೀ. ಬಾಲಾಜಿ ಬಲಿಜ ಸಂಘ (ರಿ.,) ರವರಿಗೆ ದೀರ್ಘಕಾಲದ ಗುತ್ತಿಗೆ ನೀಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ

ಪಾಲಿಕೆಯ ಸಭೆಯ ಮುಂದೆ ಮಂಡಿಸಿರುವ **ಆಯುಕ್ತರ ದಿನಾಂಕ: 16-07-2018ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 10-08-2018ರ ಸಭೆಯ ನಿರ್ಣಯ.**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ದಿನಾಂಕ: 10.08.2018ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ದರ ರೂ.4837/- (ರೂ. ನಾಲ್ಕು ಸಾವಿರದ ಎಂಟು ನೂರ ಮೂವತ್ತೇಳು ಮಾತ್ರ) ಗಳನ್ನು ನಿಗಧಿಪಡಿಸಿ, ದೀರ್ಘ ಕಾಲದ ಗುತ್ತಿಗೆ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆ ಸಭೆಯ ಮುಂದೆ ಮಂಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***12]. ವಿಷಯದ ಸಂಖ್ಯೆ: ತೆಆಸ್ಥಾಸ/ 20 /2018-19***

ಆಯುಕ್ತರ ದಿನಾಂಕ: 14-08-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಗುರುರಾಜ ಅಸೋಸಿಯೇಷನ್, ನಂ.53, ಮಾದರಿ ಮನೆಗಳ ಬೀದಿ, ಬಸವನಗುಡಿ, ಬೆಂಗಳೂರು - 560004 ರವರು ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಶ್ರೀ ಮಠಕ್ಕೆ ಗುತ್ತಿಗೆಗೆ ನೀಡಲು ಮಾನ್ಯ ಪೂಜ್ಯ ಮಹಾಪೌರರು ಹಾಗೂ ಆಯುಕ್ತರು ಆಯುಕ್ತರಿಗೆ ಮನವಿ ಸಲ್ಲಿಸಿ, ಪಾಲಿಕೆಯ ವತಿಯಿಂದ ಮಾಸಿಕ ಗುತ್ತಿಗೆಯ ಬಾಡಿಗೆ ಮೊತ್ತ ರೂ.56,440/-ಗಳನ್ನು ನಿಗಧಿಪಡಿಸಿರುವ ಮೊತ್ತವನ್ನು ಕಡಿಮೆ ಮಾಡಿ ಈ ಮಠಕ್ಕೆ ರೂ.5,000/-ಗಳು ಮಾಸಿಕ ಬಾಡಿಗೆ ನಿಗಧಿಪಡಿಸಲು ಕೋರಿರುತ್ತಾರೆ.

ಬಸನವನಗುಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ವಾರ್ಡ್ 154-ಬಸವನಗುಡಿ (ಹಳೆಯ ವಾರ್ಡ್ ಸಂಖ್ಯೆ 51ರಲ್ಲಿರುವ ಮಾದರಿ ಮನೆಗಳ ಬೀದಿ ರಸ್ತೆಯಲ್ಲಿರುವ ಕನ್ಸರ್ವೆನ್ಸಿ ಜಾಗವನ್ನು ಗುತ್ತಿಗೆ ನೀಡಲು ಕೋರಿರುತ್ತಾರೆ. ಸದರಿ ಜಾಗವನ್ನು ಭಕ್ತಾಧಿಗಳ ಉಪಯೋಗಕ್ಕೆ ಮಾತ್ರ ಬಳಸುತ್ತಿದ್ದು, ಸ್ವಚ್ಚತೆಯನ್ನು ಕಾಪಾಡಿಕೊಂಡು ಬರುತ್ತಿದ್ದು, ಇದನ್ನು ಹಾಗೆಯೇ ಬಿಟ್ಟಲ್ಲಿ ಸಮಾಜ ಘಾತುಕರಿಂದ ಮಕ್ಕಳಿಗೆ, ಮಹಿಳೆಯರಿಗೆ, ವೃದ್ಧರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ ಸದರಿ ಜಾಗವನ್ನು ಹಿಂದೆ ಪಾವತಿಸಿರುವ ಮೊತ್ತಕ್ಕೆ ನೀಡುವುದು ಅಥವಾ ಸಾಧ್ಯವಾಗದಿದ್ದಲ್ಲಿ ಅತ್ಯಂತ ಕಡಿಮೆ ಮೊತ್ತಕ್ಕೆ ವಾರ್ಷಿಕ ಗುತ್ತಿಗೆ ನೀಡಲು ಕೋರಿರುತ್ತಾರೆ.

ಸದರಿ ಜಾಗವನ್ನು 90 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಲು ಕೋರಿದ್ದ ಮೇರೆಗೆ, ಆಡಳಿತಧಿಕಾರಿ ರವರಿ ದಿನಾಂಕ 09.11.1982ರ ಸಭೆಯಲ್ಲಿ 90 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲು ನಿರ್ಣಯಿಸಿ ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲಾಗಿ, ಸರ್ಕಾರವು ದಿನಾಂಕ 24.10.1985ರಲ್ಲಿ ಸದರಿ ಜಾಗವನ್ನು ಅಂದಿನ ಮಾರುಕಟ್ಟೆ ದರದಲ್ಲಿ ಚದರಗಜ 1ಕ್ಕೆ ರೂ.275/-ರಂತೆ ಕ್ರಯಕ್ಕೆ ನೀಡಲು ಆದೇಶಿಸಿರುತ್ತಾರೆ. ಶ್ರೀಮಠವು ಪ್ರಾರಂಭವಾದಾಗಿನಿಂದ ಈ ಜಾಗಕ್ಕೆ ಗುತ್ತಿಗೆ ಆಧಾರದ ಮೇಲೆ ಹಣವನ್ನು ಪಾವತಿಸುತ್ತಿದ್ದು, 1985ರಲ್ಲಿ ಪಾಲಿಕೆಯ ತೀರ್ಮಾನದಂತೆ ಕ್ರಯಕ್ಕೆ ತೆಗೆದುಕೊಳ್ಳಲು ದಿನಾಂಕ 06.12.1985ರಲ್ಲಿ ರೂ.29429/-ಗಳನ್ನು ಪಾಲಿಕೆಗೆ ಸಂದಾಯ ಮಾಡಿರುತ್ತಾರೆ. ಮುಂದಿನ ದಿನಗಳಲ್ಲಿ ಕೆಲವು ತಾಂತ್ರಿಕ ತೊಂದರೆಗಳಿಂದ ಪತ್ರ ವ್ಯವಹಾರವು ಅಪೂರ್ಣವಾಗಿರುವುದಾಗಿ ತಿಳಿಸಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ ಎಲ್ ಎ ರವಿಸುಬ್ರಮಣ್ಯ ರವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿ, ಪ್ರಸ್ತಾಪಿತ ಗುತ್ತಿಗೆ ಜಾಗವನ್ನು ಕ್ರಯಕ್ಕೆ ನೀಡಲು ಕೋರಿರುತ್ತಾರೆ. ಮೂಲ ಕಡತವನ್ನು ದಿನಾಂಕ 06.02.2009ರ ಪತ್ರದಂತೆ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾದಂತೆ, ಸರ್ಕಾರದ ಆದೇಶ ಸಂಖ್ಯೆ

ನ.ಆ.ಇ 150 ಎಂ.ಎನ್.ಜಿ 2007, ಬೆಂಗಳೂರು, ದಿನಾಂಕ 02.07.2009 ರಲ್ಲಿ ಸದರಿ ವಿಸ್ತೀರ್ಣ 2137.7 ಚದರಡಿ ಕನ್ಸರ್ವೆನ್ಸಿ ಖಾಲಿ ಜಾಗವನ್ನು ಶ್ರೀ ಗುರುರಾಜ ಅಸೋಸಿಯೇಷನ್ ರವರಿಗೆ ಪ್ರಸ್ತುತ ಮಾರ್ಗಸೂಚಿ ಬೆಲೆ ನಿಗಧಿಪಡಿಸಿ, ಮಾರಾಟ ಮಾಡಲು ಮಂಜೂರಾತಿ ನೀಡಿರುತ್ತಾರೆ. ಸದರಿ ಆದೇಶವನ್ನು ಅಂದಿನ ಮಾನ್ಯ ಆಡಳಿತಾಧಿಕಾರಿಗಳ ದಿನಾಂಕ 03.08.2009ರ ಸಭೆಯಲ್ಲಿ ವಿಷಯದ ಸಂಖ್ಯೆ:248/2009-10ರಂತೆ ದಾಖಲಾಗಿರುತ್ತದೆ.

ಅದರಂತೆ ಸಹಾಯಕ ಕಂದಾಯ ಅಧಿಕಾರಿರವರು ಪ್ರಸ್ತಾಪಿತ ಜಾಗಕ್ಕೆ ರೂ.68,83,072/ಗಳನ್ನು ಪಾಲಿಕೆಗೆ ಸಂದಾಯ ಮಾಡಲು ದಿನಾಂಕ 07.08.2009ರಂದು ಶ್ರೀ ಗುರುರಾಜ ಅಸೋಸಿಯೇಷನ್ ರವರಿಗೆ ಪತ್ರವನ್ನು ಬರೆಯಲಾಗಿರುತ್ತದೆ. ಸದರಿ ಪತ್ರಕ್ಕೆ ಯಾವುದೇ ಸಮಜಾಯಿಷಿ ಬಂದಿರುವುದಿಲ್ಲ.

ಶ್ರೀ ಗುರುರಾಜ ಅಸೋಸಿಯೇಷನ್ ರವರು ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿ ಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಶ್ರೀ ಮಠಕ್ಕೆ ಗುತ್ತಿಗೆಗೆ ನೀಡಲು ಕೋರಿದ್ದ ಮೇರೆಗೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: 14(420)2012-13, ದಿನಾಂಕ 16-03-2013 ರಂದು ನಡೆದ ಸಭೆಯ

ತೀರ್ಮಾನದಂತೆ ಮಾಸಿಕ ಬಾಡಿಗೆ ರೂ.56,440/-ಗಳಿಗೆ ನಿಗಧಿಪಡಿಸಿ, ದಿನಾಂಕ 29.11.2011 ರಿಂದ 29.11.2016ರವರೆಗೆ ಗುತ್ತಿಗೆ ಅವಧಿಯನ್ನು ನಿಗಧಿಪಡಿಸಲಾಗಿರುತ್ತದೆ. ಆದರೆ ನಿಗಧಿಪಡಿಸಿರುವ ಗುತ್ತಿಗೆ ಮೊತ್ತವನ್ನು ಶ್ರೀ ಗುರುರಾಜ ಅಸೋಸಿಯೇಷನ್ ರವರು ಈ ತಹಲ್‌ವರೆವಿಗೂ ಪಾವತಿಸಿರುವುದಿಲ್ಲ. ಹಾಗೂ ಗುತ್ತಿಗೆ ಅವಧಿಯು ದಿನಾಂಕ 29.11.2016ಕ್ಕೆ ಪೂರ್ಣಗೊಂಡಿರುತ್ತದೆ. ಆದರೆ ಈಗ ಪತ್ರ ಸಲ್ಲಿಸಿ ಗುತ್ತಿಗೆ ನೀಡಿರುವ ಸ್ವತ್ತಿಗೆ ನಿಗಧಿಪಡಿಸಿರುವ ಬಾಡಿಗೆ ಮೊತ್ತ ರೂ.56,440/-ಗಳನ್ನು ಹೆಚ್ಚಾಗಿದ್ದು, ದೊಡ್ಡ ಮಟ್ಟದ ಬಾಡಿಗೆ ಹಣ ಕಟ್ಟಲು ಶಕ್ತಿಯಿಲ್ಲವೆಂದು ದಿನಾಂಕ 06.08.2018 ರಂದು ಮನವಿ ಪತ್ರದ ಮೂಲಕ ತಿಳಿಸಿರುತ್ತಾರೆ.

ಈಗ ಅರ್ಜಿದಾರರು ಶ್ರೀ.ಗುರುರಾಜ ಅಸೋಸಿಯೇಷನ್ ರವರ ಶ್ರೀ ರಾಘವೇಂದ್ರ ಸ್ವಾಮಿಗಳ ಮಠಕ್ಕೆ ಹೊಂದಿಕೊಂಡಿರುವಂತೆ ಇರುವ ಕನ್ಸರ್‌ವೆನ್ಸಿ ಜಾಗವನ್ನು ಶ್ರೀ ಮಠಕ್ಕೆ ಗುತ್ತಿಗೆಗೆ ನೀಡಲು ಮಾನ್ಯ ಪೂಜ್ಯ ಮಹಾಪೌರರು ಹಾಗೂ ಆಯುಕ್ತರಿಗೆ ಮನವಿ ಸಲ್ಲಿಸಿ, ಪಾಲಿಕೆಯ ವತಿಯಿಂದ ಮಾಸಿಕ ಗುತ್ತಿಗೆಯ ಬಾಡಿಗೆ ಮೊತ್ತ ರೂ.56,440/-ಗಳನ್ನು ನಿಗಧಿಪಡಿಸಿರುವ ಮೊತ್ತವನ್ನು ಕಡಿಮೆ ಮಾಡಿ, ಈ ಮಠಕ್ಕೆ ರೂ.5,000/-ಗಳು ಮಾಸಿಕ ಬಾಡಿಗೆ ನಿಗಧಿಪಡಿಸಲು ಕೋರಿರುವುದನ್ನು ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 14-08-2018ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾಸಿಕ ಗುತ್ತಿಗೆ ದರ ರೂ.5000/- (ಐದು ಸಾವಿರ ಮಾತ್ರ) ಗಳಿಗೆ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *13]. ವಿಷಯದ ಸಂಖ್ಯೆ: ತೆಆಸ್ಥಾಸ/ 21 /2018-19*

ಆಯುಕ್ತರ ದಿನಾಂಕ: 13-08-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛಭಾರತ್ ಮಿಷನ್ ಅಡಿಯಲ್ಲಿ 462 ಸಾರ್ವಜನಿಕ ಮತ್ತು ಸಮುದಾಯ ಶೌಚಾಲಯಗಳ ನಿರ್ಮಾಣಕ್ಕಾಗಿ ಪೌರಾಡಳಿತ ನಿರ್ದೇಶನಾಲಯದಿಂದ ರೂ.581.52 ಲಕ್ಷಗಳ ಅನುದಾನ ಪಾಲಿಕೆಗೆ ಬಿಡುಗಡೆಯಾಗಿರುತ್ತದೆ.

ನಿರ್ದೇಶಕರ, ಪೌರಾಡಳಿತ ನಿರ್ದೇಶನಾಲಯ ರವರ ಅಧಿಕೃತ ಜ್ಞಾಪನದ ಸಂಪೌನಿ:78:ಘವನಿ:215-16, ದಿನಾಂಕ: 12.04.2018 ರಲ್ಲಿನ ಷರತ್ತುಗಳು (12)ರಲ್ಲಿ **"ಬಿ.ಬಿ.ಎಂ.ಪಿ.ಯು ಸದರಿ ಶೌಚಾಲಯಗಳ**

**ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ ಶೇ.30ರಷ್ಟು ಅನುದಾನವನ್ನು ನಿಯಮಾನುಸಾರ ಖರ್ಚು ಮಾಡಿ ನಿಗಧಿತ ನಮೂನೆಯಲ್ಲಿ ಉಪಯುಕ್ತತಾ ಪ್ರಮಾಣ ಪತ್ರವನ್ನು ಪೌರಾಡಳಿತ ನಿರ್ದೇಶನಲಯಕ್ಕೆ ಸಲ್ಲಿಸಬೇಕು ಹಾಗೂ ಬಾಕಿ ಅನುದಾನಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಈ ಯೋಜನೆಗೆಂದು ಬಿಡುಗಡೆಯಾದ ಹಣವನ್ನು ಯೋಜನೆಯ ಉದ್ದೇಶಗಳಿಗೆ ಮಾತ್ರ ಬಳಸತಕ್ಕದ್ದು ಮತ್ತು ವರ್ಗಾಯಿಸತಕ್ಕದ್ದಲ್ಲ"** ಎಂದು ಆದೇಶಿಸಿರುತ್ತಾರೆ.

ಅದರಂತೆ, 2018–19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ಸದರಿ ವಿಷಯಕ್ಕೊಳಪಟ್ಟಂತೆ ಯಾವುದೇ ಪ್ರತ್ಯೇಕ ಲೆಕ್ಕಶೀರ್ಷಿಕೆಯನ್ನು ಅಳವಡಿಸಿಕೊಂಡಿರುವುದಿಲ್ಲ. ಈ ಸಂಬಂಧ ಜಂಟಿ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರು ಪ್ರಸ್ತುತ ಆಯವ್ಯಯದ ಲೆಕ್ಕಶೀರ್ಷಿಕೆ: ಪಿ–0274 **"ಸ್ವಚ್ಛತೆ ಮತ್ತು ಕಸ ಸಾಗಾಣಿಕೆ"** ಅಡಿ **ರೂ.65000.00 ಲಕ್ಷ**ಗಳನ್ನು ಮೀಸಲಿರಿಸಲಾಗಿದ್ದು, ಪೌರಾಡಳಿತ ನಿರ್ದೇಶನಾಲಯದಿಂದ ಪಾಲಿಕೆಗೆ ಬಿಡುಗಡೆಯಾಗಿರುವ ರೂ.581.52 ಲಕ್ಷಗಳ ಷರತ್ತು (12)ರಂತೆ ಶೇ.3 ಅಂದರೆ ರೂ.1,91,90,221/–ಗಳನ್ನು ಸದರಿ ಲೆಕ್ಕಶೀರ್ಷಿಕೆಯಡಿ ವಂತಿಗೆ ಮೊತ್ತವಾಗಿ ಭರಿಸಬಹುದಾಗಿರುತ್ತದೆ ಎಂದು ವರದಿಸಿರುತ್ತಾರೆ.

218–19ನೇ ಸಾಲಿನ ಪಾಲಿಕೆಯ ಆಯವ್ಯಯ ಲೆಕ್ಕಶೀರ್ಷಿಕೆ: ಪಿ–0274 ಅಡಿ ರೂ.1,91,90,221/–ಗಳನ್ನು ವಂತಿಗೆ ಮೊತ್ತವಾಗಿ ಭರಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕೈಗೊಳ್ಳುವ ಕುರಿತು ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 13–08–2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/ 22 /2018–19***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 21–08–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 139ರ ಚಾಮರಾಜಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ ಪಿ–1771 ಅನುದಾನದಡಿ Spillover works ಗಳಿಗಾಗಿ Lumpsum ರೂ.1214.65 ಲಕ್ಷಗಳಿಗೆ ಅನುದಾನ ಮೀಸಲಿರಿಸಿದ್ದು, ಸದರಿ ಕಾಮಗಾರಿಗಳಿಗೆ ಪ್ರಸ್ತಾಪಿತ ಕಾಮಗಾರಿಗೆ ಜಾಬ್‌ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Name of works | Head of Account | Job Code | Est cost (Rs in Lakhs) |
|---|---|---|---|---|
| 1 | Providing SS slab to side drain at Anandapuram in ward No.139 | P-1771 | 139-14-000022 | 10.00 |
| 2 | Improvements of damaged CC road at Basid saraj road crosses in ward No.139 | P-1771 | 139-14-000025 | 10.00 |
| 3 | Improvements of drain & CC road at Anandapuram 2nd main road in ward No.139 | P-1771 | 139-15-000022 | 10.00 |
| 4 | Improvements CC road Providing kerbstones at puttenhalli 2nd 3rd cross in ward No.139 | P-1771 | 139-15-000017 | 15.00 |
| 5 | Improvements of cc road at Jubliee saw mamil compound in ward No.139 | P-1771 | 139-15-000014 | 10.00 |
| 6 | Providing Asphalting concrete to Avenue road from Market circle to O.T pet crops and Surrounding in ward No.139 | P-2201 | 139-13-000026 | 49.90 |

| | | | | |
|---|---|---|---|---|
| 7 | Providing Asphalting concrete to Mysore road (north side) from K.R. Market circle upto A.S. char street cross in ward No.139 | P-2201 | 139-13-000027 | 49.94 |
| 8 | Providing Asphalting concrete to south side of Mysore road from K.R. Market circle N.T. pet 3rd main road in ward No.139 | P-2201 | 139-13-000029 | 49.92 |
| 9 | Providing Asphalting concrete to Mysore road from (north side) A.S char street junction to TCM Royan road in ward No.139 | P-2201 | 139-13-000025 | 49.98 |
| 10 | Providing Asphalting concrete 2nd and 4th cross road chamrajpet in ward No.139 | P-2201 | 139-13-000030 | 49.83 |
| 11 | Providing Asphalting concrete from Minto Eye Hospital to Royan Circle in ward No.139 | P-2201 | 139-13-000028 | 49.94 |

ಮೇಲ್ಕಾಣಿಸಿದ ಕಾಮಗಾರಿಗಳನ್ನು 2015–16ನೇ ಸಾಲಿನಲ್ಲಿ ಫ್ರೀಜ್ ಮಾಡಲಾದ ಕಾಮಗಾರಿಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುತ್ತದೆ.

ಮುಂದುವರೆದು ಸದರಿ ಕಾಮಗಾರಿಗೆ ಡಿ–ಫ್ರೀಜ್ ಮಾಡುವ ಬಗ್ಗೆ ಮುಖ್ಯ ಆರ್ಥಿಕ ಅಧಿಕಾರಿಗಳ ಅಭಿಪ್ರಾಯ ಕೇಳಲಾಗಿ ಸದರಿಯವರು ವರದಿ ಮಾಡಿರುವಂತೆ, 2017–18ನೇ ಸಾಲಿನ ಆಯವ್ಯಯ ಪ್ರಕ್ರಿಯೆ ಮುಗಿದಿರುತ್ತದೆ. 2018–19ನೇ ಕರಡು ಆಯವ್ಯಯದಲ್ಲಿ ಪಿ–2201ರಲ್ಲಿ ಮುಂದುವರೆದ ಕಾಮಗಾರಿಗಳ ಅಡಿ ರೂ.159.00 ಲಕ್ಷಗಳು ಹಾಗು ಪಿ–1771 ಅಡಿ ಮುಂದುವರೆದ ಕಾಮಗಾರಿಗಳ ಅಡಿ ರೂ.9515.00 ಲಕ್ಷಗಳ ಅನುದಾನ ಮೀಸಲಿರಿಸಿದೆ. 2018–19ನೇ ಸಾಲಿನ ಆಯವ್ಯಯವು ಪಾಲಿಕೆ ಸಭೆಯಲ್ಲಿ ಅನುಮೋದನೆ ಗೊಂಡಿದ್ದು ಫ್ರೀಜ್ ಕಾಮಗಾರಿಗಳಿಗೆ ಆಯವ್ಯಯದಲ್ಲಿ ಅನುದಾನ ಅಳವಡಿಸಿಕೊಂಡಿರುವುದಿಲ್ಲ. ಡಿ–ಫ್ರೀಜ್ ಗೊಳಿಸಲು ಅನುಮೋದನೆ ಹಾಗು ಅನುದಾನ ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಬೇಕಿರುತ್ತದೆ ಎಂದು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ಮಾನ್ಯ ಆಯುಕ್ತರವರು ಆದೇಶ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರು ಆದೇಶಿಸಿದಂತೆ ವಾರ್ಡ್–139ರಲ್ಲಿ ಪ್ರಸ್ತಾಪಿತ 11 ಕಾಮಗಾರಿಗಳನ್ನು ಮುಖ್ಯ ಆರ್ಥಿಕ ಅಧಿಕಾರಿಗಳ ಅಭಿಪ್ರಾಯದಂತೆ ಡಿ–ಫ್ರೀಜ್ ಮಾಡಲು ಸೂಕ್ತ ನಿರ್ಣಯ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ಕಾಮಗಾರಿಗಳು ಪೂರ್ಣಗೊಂಡಿರುವ ಹಿನ್ನಲೆಯಲ್ಲಿ ಅನುದಾನವನ್ನು 2018–19ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಭರಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಪಾವತಿಗೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## *15]. ವಿಷಯದ ಸಂಖ್ಯೆ: ತೆಆಸ್ಥಾಸ/ 23 /2018–19*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 27–08–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 67 ಕ್ಕೆ ನಾಗಪುರ ವಾರ್ಡ್ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ ಪಿ–3111 (State Finance United Grants) ಅನುದಾನದಡಿಯಲ್ಲಿ ಕೈಗೆತ್ತಿಕೊಳ್ಳಲು ಜಾಬ್ ಸಂಖ್ಯೆ ನೀಡಲು ಹಾಗೂ ಕ್ರಿಯಾ ಯೋಜನೆ ಅನುಮೋದನೆಗೆ ಮುಖ್ಯ ಅಭಿಯಂತರರು (ಪಶ್ಚಿಮ) ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.

| Sl. No | Name of works | Esti cost in lakhs |
|---|---|---|
| 1 | Providing Grill works and gazeeba at vivekananda park in ward No.67 | 30.00 |
| 2 | Providing S.S. Railing and walking track at vivekananda park in ward No.67 | 20.00 |
| 3 | Construction of Basaveshwara statue at sandal soap factory circle (Raniabbakka Circle) in ward No.67 | 50.00 |
| 4 | Improvements to park at sandal soap factory circle (Rani abbakka circle) in ward No.67 | 50.00 |
| 5 | Improvements to drain and footpath and construction to culvert at 12th main 1st block Rajajinagara in ward No.67 | 25.00 |
| 6 | Providing CC drain and CC road and other improvement work at Bhagay jyothi colony in ward No.67 | 40.00 |
| 7 | Providig Gym equipments to GYM building at Bhovipalya in ward No.67 | 20.00 |
| 8 | Providing Sanitary works at 12th cross Kethamaranahalli in ward No.67 | 15.00 |
| | **TOTAL** | **250.00** |

2018–19 ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3111 ಅಡಿ ವಾರ್ಡ್ 44 ಕ್ಕೆ ರೂ.490.00 ಲಕ್ಷಗಳು ಅನುದಾನ ನಿಗಧಿಪಡಿಸಿದೆ. ಮಹಲಕ್ಷ್ಮೀ ಲೇಔಟ್ ವಿಧಾನ ಸಭಾ ಕ್ಷೇತ್ರದ ಶಾಸಕ ಶ್ರೀ.ಕೆ.ಗೋಪಾಲಯ್ಯ ರವರು ಮಾನ್ಯ ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರಿಗೆ ಪತ್ರ ನೀಡಿ ವಾರ್ಡ್ 44ಕ್ಕೆ ಮೀಸಲಿಟ್ಟಿರುವ ಅನುದಾನದಲ್ಲಿ ವಾರ್ಡ್ 67 ಕ್ಕೆ ಪ್ರಸ್ತಾಪಿಸಿದ 08 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.250.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ.

ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ಅನುದಾನ ಲಭ್ಯತೆಯ ಬಗ್ಗೆ ವರದಿ ಮಾಡಿರುವಂತೆ, 2018–19ನೇ ಸಾಲಿನ ಪಾಲಿಕೆ ಅಯವ್ಯಯದ ಪಿ–3111 ಅಡಿಯಲ್ಲಿ ವಾರ್ಡ್ ಸಂಖ್ಯೆ:44 ಕ್ಕೆ ನಿಗಧಿಪಡಿಸಿದ ರೂ.490.00 ಲಕ್ಷಗಳ ಅನುದಾನದಲ್ಲಿ (ಅನುಬಂಧ– 02 ರ ಕ್ರಮ ಸಂಖ್ಯೆ 04 ರಲ್ಲಿ) ವಾರ್ಡ್ 67ಕ್ಕೆ ಪ್ರಸ್ತಾವನೆಯ 08 ಕಾಮಗಾರಿಗಳ ಅಂದಾಜು ಮೊತ್ತ ರೂ.250.00 ಲಕ್ಷಗಳ ಅನುದಾನ ಹಂಚಿಕೆ ಮಾಡಿ ಜಾಬ್ ಕೋಡ್ ನೀಡುವ ಬಗ್ಗೆ ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಮಂದೆ ಮಂಡಿಸಲು ಕೋರಿರುತ್ತಾರೆ ಹಾಗು ಮೇಲ್ಕಂಡ ಉಲ್ಲೇಖದ ಅಡಿಯಲ್ಲಿ ಮಾನ್ಯ ಅಯುಕ್ತರವರು ಪ್ರಸ್ಥಾವನೆಯ ಅನುಮೋದನೆಗೆ ಸ್ಥಾಯಿ ಸಮಿತಿಯ ಮಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2018–19ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–3111 ಅಡಿಯಲ್ಲಿ ವಾರ್ಡ್ 44ಕ್ಕೆ ಲಭ್ಯವಿರುವ ರೂ.490.00 ಲಕ್ಷಗಳ ಅನುದಾನದಲ್ಲಿ ವಾರ್ಡ್ ಸಂಖ್ಯೆ.67ಕ್ಕೆ 08 ಮೇಲ್ಕಾಣಿಸಿದ ಕಾಮಗಾರಿಗಳ ಪ್ರಸ್ತಾವನೆಯ ಒಟ್ಟು ಅಂದಾಜು ಮೊತ್ತ ರೂ.250.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಿ ಜಾಬ್ ಕೋಡ್ ನೀಡುವ ಬಗ್ಗೆ ಹಾಗೂ ಕಾಮಗಾರಿಯ ಕ್ರಿಯಾ ಯೋಜನೆ ಅನುಮೋದನೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 27–08–2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು:-

## 16]. ವಿಷಯದ ಸಂಖ್ಯೆ: ತೆಆಸ್ಥಾಸ/ 24 /2018-19

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30-08-2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿಗೆ ಅರಣ್ಯ ಘಟಕಕ್ಕೆ ಸಂಬಂಧಪಟ್ಟಂತೆ ಮಂಜೂರಾದ ಆಯವ್ಯಯದಲ್ಲಿ ಕೆಳಕಂಡ ಕಾಮಗಾರಿಗಳಿಗೆ ಒದಗಿಸಲಾದ ಅನುದಾನವು ನೈಜವಾಗಿ ಬೇಕಾಗಿರುವ ಅನುದಾನಕ್ಕಿಂತ ಕಡಿಮೆ ಅನುದಾನವನ್ನು ಒದಗಿಸಲಾಗಿದೆ. ಅವುಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

| ಕ್ರಮ ಸಂಖ್ಯೆ | ಪಿ-ಕೋಡ್ | ಕಾಮಗಾರಿ ವಿವರ | ಆಯವ್ಯಯದಲ್ಲಿ ಒದಗಿಸಿರುವ ಅನುದಾನ (ರೂ. ಲಕ್ಷಗಳಲ್ಲಿ) | ಅಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ) | ಕೊರತೆ ಬೀಳುವ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 1. | ಪಿ-0314 | ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ ಕಾಮಗಾರಿ | 250.00 | 506.25 | 256.25 |
| 2. | ಪಿ-3221 | ಶಾಲಾ ಕಾಲೇಜುಗಳ ಆವರಣ / ಕೆರೆಯ ಬದಿಗಳು ಮತ್ತು ಸಂಘ / ಸಂಸ್ಥೆಗಳ ಆವರಣದಲ್ಲಿ ಗಿಡ ನೆಡುವ ಕಾಮಗಾರಿ (8"*12") | 25.00 | 385.40 | 360.40 |
| 3. | ಪಿ-1701 | ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿ | 300.00 | 793.33 | 493.33 |

ಮುಂದುವರೆದು ಮೇಲಿನ ಕೋಷ್ಟಕದಲ್ಲಿ ವಿವರಿಸಿರುವ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆಗೆ (ಪಿ-0314) ಸಂಬಂಧಿಸಿದಂತೆ ಹಾಗೂ ಶಾಲಾ/ಕಾಲೇಜುಗಳ ಆವರಣ/ಕೆರೆಯ ಬದಿಗಳು ಮತ್ತು ಸಂಘ/ಸಂಸ್ಥೆಗಳ ಆವರಣದಲ್ಲಿ ಗಿಡ ನೆಡುವ ಕಾಮಗಾರಿ (ಪಿ-3221)ರಡಿ ಹಾಗೂ ಮರಗಳ ವ್ಯವಸ್ಥಿತ ನಿರ್ವಹಣೆ ಕಾಮಗಾರಿ (ಪಿ-1701) ರಡಿಯಲ್ಲಿ ಕಡಿಮೆ ಬೀಳುವ ಮೊತ್ತವನ್ನು ಬೇರೆ ಯಾವುದಾದರೂ ಪಿ-ಕೋಡ್‌ರಡಿ ಲಭ್ಯವಿರುವ ಅನುದಾನದಿಂದ ಮರುಹೊಂದಾಣಿಕೆ ಮಾಡಿಕೊಡಬೇಕಾಗಿ ಅರಣ್ಯ ಘಟಕದ ವತಿಯಿಂದ ಕೋರಿರುತ್ತಾರೆ. ಸದರಿ ಕಾಮಗಾರಿಗಳಿಗೆ ಕಡಿಮೆ ಬೀಳುವ ಮೊತ್ತವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಿಂದ ಮರುಹಂಚಿಕೆ ಮಾಡಿಕೊಡಲು ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ನಿರ್ಣಯ:- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ರವರೊಂದಿಗೆ ಚರ್ಚಿಸಲಾಗಿ, 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.1868/67 ರಲ್ಲಿ ರೂ.200.00 ಲಕ್ಷ, ಪಿ.ಸಂಖ್ಯೆ 3218/67 ರಲ್ಲಿ ರೂ.300.00 ಲಕ್ಷ, ಪಿ.ಸಂಖ್ಯೆ 3114/66 ರಲ್ಲಿ ರೂ.100.00 ಲಕ್ಷ ಮತ್ತು ಪಿ.ಸಂಖ್ಯೆ 3217/66 ರಲ್ಲಿ ರೂ.80.00 ಲಕ್ಷ &ಪಿ. 1852/65 ರೂ.25.00 ಲಕ್ಷ ಒಟ್ಟು ರೂ.705.00 ಲಕ್ಷಗಳ ಅನುದಾನ ಒದಗಿಸಿದ್ದು, ಸದರಿ ಅನುದಾನವನ್ನು ಹಿಂಪಡೆದು, ಲೆಕ್ಕ ಶೀರ್ಷಿಕೆ ಪಿ.314/65ಕ್ಕೆ ಒದಗಿಸಿರುವ ಅನುದಾನ ರೂ.250.00 ಲಕ್ಷಗಳಿಂದ ರೂ.506.00 ಲಕ್ಷಗಳಿಗೆ ಮತ್ತು ಲೆಕ್ಕ ಶೀರ್ಷಿಕೆ ಪಿ.1701/66ಕ್ಕೆ ಒದಗಿಸಿರುವ ಅನುದಾನ ರೂ.300.00 ಲಕ್ಷಗಳಿಂದ ರೂ.749.00 ಲಕ್ಷಗಳಿಗೆ ಮರು ಹಂಚಿಕೆ ಮಾಡಿದ್ದು, ಅದರಂತೆ ಆಯುಕ್ತರು ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***17]. ವಿಷಯದ ಸಂಖ್ಯೆ: ತೆಆಸ್ಥಾಸ/ 25 /2018–19***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30–08–2018ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಹದೇವಪುರ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 86ಕ್ಕೆ 2018–19ನೇ ಸಾಲಿನ ಆಯವ್ಯಯದಲ್ಲಿರುವ ಲೆಕ್ಕಶೀರ್ಷಿಕೆ ಪಿ–3399ರಲ್ಲಿ ನಿಗಧಿಪಡಿಸಿರುವ ಅನುದಾನ ರೂ.700.00 ಲಕ್ಷಗಳ ಪೈಕಿ ಪಶ್ಚಿಮ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 43ಕ್ಕೆ 09 ಕಾಮಗಾರಿಗಳಿಗೆ ರೂ.200.00 ಲಕ್ಷಗಳ ಅನುದಾನದ ನೀಡಲು ಪಾಲಿಕೆಯ ವಾರ್ಡ್ ಸಂಖ್ಯೆ: 86ರ ಸದಸ್ಯರು ಪತ್ರ ದಿ: 26.07.2018 ರಂದು ಅನುದಾನವನ್ನು ವರ್ಗಾಯಿಸಲು ಕೋರಿದ್ದು, ಮಾನ್ಯ ಆಯುಕ್ತರು ಮುಖ್ಯ ಆರ್ಥಿಕ ಅಧಿಕಾರಿ ರವರಿಗೆ ಸೂಚನೆ ನೀಡಿದ್ದು ಮತ್ತು ವಾರ್ಡ್ ಸಂಖ್ಯೆ: 43ರ ಸದಸ್ಯರು ಪತ್ರ ದಿ: 02.08.2018 ರಲ್ಲಿ ಕೋರಿರುವಂತೆ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| Sl.No | Name of works | Est cost (in lakhs) |
|---|---|---|
| 1 | Development of Byalurangamandira premises in Nandini Layout . | 25.00 |
| 2 | Providing protection Grills to Bayalurangamandira premises in Nandini Layout. | 25.00 |
| 3 | Additional works to Dyanamandira beside Durga parameshwari temple. | 15.00 |
| 4 | Improvements to drains and culverts in 10th, 11th 9th cross and surrounding area in parimalanagara. | 35.00 |
| 5 | Providing children equipments to park in front of PWD welfare office building . | 20.00 |
| 6 | Reparis to chain link fencing and providing Gym Equuipments at park in PWD office Quarters. | 30.00 |
| 7 | Maintenance of parks. | 15.00 |
| 8 | providing rain water harvesting in park and play ground. | 25.00 |
| 9 | Reparis to chain link fencing and Improvments to play ground beside ward office . | 10.00 |
| | **TOTAL** | **200.00** |

ಮುಖ್ಯ ಅಭಿಯಂತರರು (ಪಶ್ಚಿಮ) ರವರು ಕಂಡಿಕೆ (05) ರಲ್ಲಿ ಸದರಿ ಕಾಮಗಾರಿಗಳಿಗೆ ಜಾಬ್ ಕೋಡ್ ನೀಡಲು ವರದಿ ಮಂಡಿಸಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (09) ರಲ್ಲಿ ವಾರ್ಡ್ ಸಂಖ್ಯೆ: 86ಕ್ಕೆ ಲೆಕ್ಕಶೀರ್ಷಿಕೆ ಪಿ–3399ರಲ್ಲಿ ಅನುವು ಮಾಡಿರುವ ಮೊತ್ತ ರೂ.700.00 ಲಕ್ಷಗಳಾಗಿದ್ದು ಈ ಪೈಕಿ ವಾರ್ಡ್ ಸಂಖ್ಯೆ: 43ಕ್ಕೆ ರೂ.200.00 ಲಕ್ಷಗಳನ್ನು ಅನುವು ಮಾಡಲು ಸಮಿತಿಯ ಮುಂದೆ ಮಂಡಿಸಲು ವರದಿ ಸಲ್ಲಿಸಿರುತ್ತಾರೆ.

ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶಿಸಿದಂತೆ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಮಹದೇವಪುರ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 86ಕ್ಕೆ 2018–19ನೇ ಸಾಲಿನ ಆಯವ್ಯಯದಲ್ಲಿರುವ ಲೆಕ್ಕಶೀರ್ಷಿಕೆ ಪಿ–3399 ರಲ್ಲಿ ನಿಗಧಿಪಡಿಸಿರುವ ಅನುದಾನ ರೂ.700.00 ಲಕ್ಷಗಳ ಪೈಕಿ ಪಶ್ಚಿಮ ವಲಯಕ್ಕೆ ಸೇರಿರುವ ವಾರ್ಡ್ ಸಂಖ್ಯೆ: 43ಕ್ಕೆ 09 ಕಾಮಗಾರಿಗಳಿಗೆ

ರೂ.200.00 ಲಕ್ಷಗಳ ಅನುದಾನವನ್ನು ಮರುಹೊಂದಾಣಿಕೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30-08-2018ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***18]. ವಿಷಯದ ಸಂಖ್ಯೆ: ತೆಆಸ್ಥಾಸ/ 27 /2018-19***

**ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ: 04-09-2018ರಂದು ನಡೆದ ಸಭೆಯಲ್ಲಿ ತೆಗದುಕೊಂಡ ಸ್ವಯಂ ನಿರ್ಣಯ:-** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, 2018-19ನೇ ಸಾಲಿನ ಆಯವ್ಯಯದಲ್ಲಿ ಕಡಿಮೆ ಮೊತ್ತವನ್ನು ಮೀಸಲಿರಿಸಲಾಗಿರುತ್ತದೆ. ವಿವಿಧ ಭಾಗದ ಪಾಲಿಕೆಯ ಸದಸ್ಯರು ಬೇಡಿಕೆಯ ಮನವಿ ಪತ್ರವನ್ನು ಸಮಿತಿಗೆ ಸಲ್ಲಿಸಿ, ಉದ್ಯಾನವನಗಳ ಅಭಿವೃದ್ಧಿಗೆ ಒತ್ತು ನೀಡುವಂತೆ ಹಾಗೂ ತಮ್ಮ ವಾರ್ಡಿನ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಪ್ರಸಕ್ತ ಸಾಲಿನಲ್ಲಿ ಅನುದಾನವನ್ನು ಹಂಚಿಕೆ ಮಾಡುವಂತೆ ಸಹ ಕೋರಿರುತ್ತಾರೆ. ತತ್ಸಬಂಧವಾಗಿ ದಿನಾಂಕ:04/09/2018ರಂದು ನಡೆದ ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಸುಧೀರ್ಘವಾಗಿ ಚರ್ಚಿಸಲಾಗಿ, ಈ ಕೆಳಕಂಡತೆ ಲೆಕ್ಕಶೀರ್ಷಿಕೆ ಪಿ-3374, ಪಿ-3375 ಮತ್ತು ಪಿ-1519ರಿಂದ ಲೆಕ್ಕಶೀರ್ಷಿಕೆ ಪಿ-3215 ಹಾಗೂ ಪಿ-0311 ಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳುವ ಸಂಬಂಧ ಚರ್ಚಿಸಲಾಯಿತು.

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ಆಯವ್ಯಯದ ಅನುದಾನದಲ್ಲಿ ಲಭ್ಯವಿರುವ ಒಟ್ಟು ಮೊತ್ತ | ಆಯವ್ಯಯದ ಅನುದಾನದಲ್ಲಿ ಲಭ್ಯವಿರುವ ಒಟ್ಟು ಮೊತ್ತದ ಪೈಕಿ ಮರುಹೊಂದಾಣಿಕೆ ಮಾಡಿಕೊಳ್ಳಲು ಸಮಿತಿಯು ಪ್ರಸ್ತಾಪಿಸಿರುವ ಮೊತ್ತ | ಲೆಕ್ಕಶೀರ್ಷಿಕೆ ಪಿ-311ಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸಮಿತಿಯು ಪ್ರಸ್ತಾಪಿಸಿರುವ ಮೊತ್ತ | ಲೆಕ್ಕಶೀರ್ಷಿಕೆ ಪಿ-3215ಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸಮಿತಿಯು ಪ್ರಸ್ತಾಪಿಸಿರುವ ಮೊತ್ತ |
|---|---|---|---|---|---|
| 1 | ಪಿ-3374 | 3000.00 | 1800.00 | 1480.00 | 320.00 |
| 2 | ಪಿ-3375 | 1000.00 | 500.00 | 0 | 500.00 |
| 3 | ಪಿ-1519 | 200.00 | 200.00 | 0 | 200.00 |
| ಒಟ್ಟು | | | 2500.00 | 1480.00 | 1020.00 |

ಮೇಲ್ಕಂಡ ವಿವಿಧ ಲೆಕ್ಕಶೀರ್ಷಿಕೆಗಳಿಂದ ಸಂಬಂಧಿಸಿದ ಲೆಕ್ಕಶೀರ್ಷಿಕೆಗಳಿಗೆ ಮರುಹೊಂದಾಣಿಕೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ತೋಟಗಾರಿಕೆ ಸ್ಥಾಯಿ ಸಮಿತಿಯಿಂದ ಹಂಚಿಕೆ ಮಾಡಲಾಗಿರುವ ಅನುದಾನಕ್ಕೆ ಜಾಬ್ ಸಂಖ್ಯೆ ತೆಗೆದುಕೊಂಡು, ಮೆ||ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖೇನ ಅಥವಾ ದಿ ನರ್ಸರಿ ಮೆನ್ ಕೋ-ಆಪರೇಟಿವ್ ಸೊಸೈಟಿ, ಲಾಲ್‌ಬಾಗ್ ಮೂಲಕ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಳನ್ನು ಗೌರವಾನ್ವಿತ ಸದಸ್ಯರುಗಳ ಸಲಹೆಯಂತೆ ತ್ವರಿತವಾಗಿ ಅನುಷ್ಠಾನಗೊಳಿಸಲು ಸಮಿತಿಯ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ತೀರ್ಮಾನ ಕೈಗೊಳ್ಳಲಾಗಿರುತ್ತದೆ.

**ತೀರ್ಮಾನ: 2018-19ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿಯಲ್ಲಿ ಲಭ್ಯವಿರುವ ಅನುದಾನದ ಪೈಕಿ, ಪ್ರಸ್ತಾವನೆಯಲ್ಲಿರುವ ಲೆಕ್ಕಶೀರ್ಷಿಕೆ ಪಿ-3374, ಪಿ-3375**

ಮತ್ತು ಪಿ–1519 ಗಳಿಂದ ಒಟ್ಟು ರೂ.2500.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ ಪಿ–0311ಕ್ಕೆ ರೂ.1480.00 ಲಕ್ಷ ಹಾಗೂ ಪಿ–3215ಕ್ಕೆ ರೂ.1020.00 ಲಕ್ಷಗಳನ್ನು ಮರು ಹೊಂದಾಣಿಕೆಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ, ಈ ಕೆಳಕಂಡ ವಾರ್ಡ್‌ಗಳಿಗೆ ಹಂಚಿಕೆ ಮಾಡಿರುವಂತೆ ಜಾಬ್ ಸಂಖ್ಯೆ ಪಡೆದು, ಅಭಿವೃದ್ಧಿ ಕಾಮಗಾರಿ ಹಾಗೂ ಇನ್ನಿತರೆ ಕಾಮಗಾರಿಗಳನ್ನು ಮೆ॥ಕೆ.ಆರ್.ಐ.ಡಿ.ಎಲ್ ಸಂಸ್ಥೆ ಅಥವಾ ದಿ ನರ್ಸರಿ ಮೆನ್ ಕೋ–ಆಪರೇಟಿವ್ ಸೊಸೈಟಿ, ಲಾಲ್‌ಬಾಗ್ ಮುಖೇನ ಗೌರವಾನ್ವಿತ ಸದಸ್ಯರುಗಳ ಸಲಹೆಯಂತೆ ತ್ವರಿತವಾಗಿ ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**01.** ಉದ್ಯಾನವನಗಳ ಭೂವಿನ್ಯಾಸ, ವೃತ್ತಗಳು, ಮೀಡಿಯನ್‌ಗಳು ಮತ್ತು ಬುಲೇವಾರ್ಡ್‌ಗಳ ಅಭಿವೃದ್ಧಿ (ಜನೋದ್ಯಾನ ಕಾಮಗಾರಿಗಳು) ಪಿ–0311ಕ್ಕೆ ಮರುಹೊಂದಾಣಿಕೆ ಮಾಡಿಕೊಂಡು ವಿವಿಧ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿರುವ ವಿವರ

| ಕ್ರ.ಸಂ | ವಾರ್ಡ್ ಸಂಖ್ಯೆ | ಹಂಚಿಕೆ ಮಾಡಲಾಗಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 01 | 27 | 100.00 |
| 02 | 31 | 100.00 |
| 03 | 32 | 50.00 |
| 04 | 35 | 60.00 |
| 05 | 50 | 70.00 |
| 06 | 60 | 50.00 |
| 07 | 61 | 100.00 |
| 08 | 62 | 70.00 |
| 09 | 66 | 50.00 |
| 10 | 67 | 40.00 |
| 11 | 78 | 50.00 |
| 12 | 101 | 70.00 |
| 13 | 119 | 20.00 |
| 14 | 132 | 20.00 |
| 15 | 136 | 150.00 |
| 16 | 138 | 50.00 |
| 17 | 139 | 50.00 |
| 18 | 140 | 100.00 |
| 19 | 148 | 20.00 |
| 20 | 153 | 20.00 |
| 21 | 154 | 20.00 |
| 22 | 155 | 20.00 |
| 23 | 158 | 20.00 |
| 24 | 162 | 20.00 |

| | | |
|---|---|---|
| 25 | 165 | 20.00 |
| 26 | 168 | 20.00 |
| 27 | 173 | 70.00 |
| 28 | 176 | 50.00 |
| | ಒಟ್ಟು | **1480.00** |

**02.ಹೊಸ ವಲಯಗಳಲ್ಲಿ ಉದ್ಯಾನವನಗಳ ಅಭಿವೃದ್ಧಿ ಪಿ-3215ಕ್ಕೆ ಮರುಹೊಂದಾಣಿಕೆ ಮಾಡಿಕೊಂಡು ವಿವಿಧ ವಾರ್ಡ್‌ಗಳಿಗೆ ಹಂಚಿಕೆ ಮಾಡಲಾಗಿರುವ ವಿವರ**

| ಕ್ರ.ಸಂ | ವಾರ್ಡ್ ಸಂಖ್ಯೆ | ಹಂಚಿಕೆ ಮಾಡಲಾಗಿರುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 01 | 01 | 70.00 |
| 02 | 03 | 50.00 |
| | | 20.00 |
| 03 | 05 | 40.00 |
| 04 | 06 | 110.00 |
| 05 | 25 | 100.00 |
| 06 | 184 | 100.00 |
| 07 | 185 | 20.00 |
| 08 | 187 | 100.00 |
| | | 20.00 |
| 09 | 191 | 90.00 |
| 10 | 193 | 100.00 |
| 11 | 196 | 175.00 |
| 12 | 198 | 25.00 |
| | ಒಟ್ಟು | **1020.00** |

**ನಿರ್ಣಯ: ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ: 04.09.2018ರ ಸಭೆಯಲ್ಲಿ ತೀರ್ಮಾನವಾದ ಸ್ವಯಂ ನಿರ್ಣಯ (SUO-MOTTO RESOLUTION) ವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***19]. ವಿಷಯದ ಸಂಖ್ಯೆ: ತೆಆಸ್ಥಾಸ/ 28 /2018-19***

ಆಯುಕ್ತರ ಟಿಪ್ಪಣಿ ದಿನಾಂಕ:19-07-2018ರಲ್ಲಿ ಪ್ರಸ್ತಾಪಿಸಿರುವಂತೆ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಮಾನ್ಯ ಶ್ರೀ.ಅಬ್ದುಲ್ ರಕೀಬ್ ಝಾಕೀರ್ ರವರು ಕಲ್ಯಾಣ ವಿಭಾಗದಲ್ಲಿ ಗೌರವಧನ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಹೊಲಿಗೆ ಶಿಕ್ಷಕರು, ಹೊಲಿಗೆ ಯಂತ್ರ ದುರಸ್ತಿಗಾರರು, ಮೇಲ್ವಿಚಾರಕರು ರವರುಗಳಿಗೆ ಕರಕುಶಲ ಶಿಕ್ಷಕರಿಗೆ ನೀಡುತ್ತಿರುವ ವೇತನ ಸಮಾನವಾಗಿ, ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಕುರಿತು ದಿನಾಂಕ: 09/08/2016 ರಂದು ಪಾಲಿಕೆಯ ಸಭೆಯ ವಿ.ಸ:222/2016-17ರಲ್ಲಿ ಜಾರಿ ಮಾಡಿರುವ ನಿರ್ಣಯದ ಮೇರೆಗೆ ಪಾಲಿಕೆಯ ಕರಕುಶಲ

ಶಿಕ್ಷಕರಿಗೆ ನೀಡುತ್ತಿರುವ ವೇತನ ಶ್ರೇಣಿಗೆ ಅನುಗುಣವಾಗಿ ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ಗೌರವ ಸಂಭಾವನೆಯನ್ನು ನಿಗಧಿಪಡಿಸಲು ಆಯುಕ್ತರು ಅಗತ್ಯ ಕ್ರಮವಹಿಸುವುದೆಂದು ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ ಸೂಕ್ತ ಕ್ರಮ ಕೈಗೊಂಡು ಪಾಲಿಕೆಯ ಸಭೆಯ ತಿರ್ಮಾನವನ್ನು ಅನುಷ್ಠಾನಗೊಳಿಸುವಂತೆ ಕೋರಿ ಮಾನ್ಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು (ಕಲ್ಯಾಣ) ರವರಿಗೆ ಸಂಭೋದಿಸಿರುವ ಪತ್ರಗಳನ್ನು ಕಡತದಲ್ಲಿ ಲಗತ್ತಿಸಿ, ಪ್ರಸ್ತಾವನೆಯನ್ನು ಈ ಕೆಳಕಂಡಂತೆ ಸಲ್ಲಿಸಲಾಗಿದೆ.

ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನಿಗಧಿ ಪಡಿಸಲಾಗುವ ಸಂದರ್ಭಗಳಲ್ಲಿ ನಿಯಮಾವಳಿಗಳ ಮೇರೆಗೆ ಈ ಕೆಳಕಂಡ ಮಾನದಂಡಗಳನ್ನು ಪರಿಶೀಲಿಸಬೇಕಾಗಿರುತ್ತದೆ.

1. ಸದರಿ ತಾತ್ಕಾಲಿಕ ನೌಕರರನ್ನು ಮಂಜೂರಾತಿ ಹುದ್ದೆಗೆ ಎದುರಾಗಿ, ಮಂಜೂರಾತಿ ಹುದ್ದೆಯ ಸಮಾನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನೇಮಿಸಿಕೊಳ್ಳಲಾಗಿದೆಯೇ?
2. ನೇಮಾಕಾತಿ ಸಮಯದಲ್ಲಿ ಮಂಜೂರಾತಿ ಹುದ್ದೆಗೆ ನಿಗಧಿಪಡಿಸಲಾಗಿರುವ ಶೈಕ್ಷಣಿಕ/ತಾಂತ್ರಿಕ ವಿದ್ಯಾರ್ಹತೆಗಳನ್ನು ಪರಿಗಣನೆಗೆ ತೆಗೆದು ಕೊಳ್ಳಲಾಗಿದೆಯೇ?
3. ನೇಮಕಾತಿ ಪ್ರಕ್ರಿಯೆಯನ್ನು ಯಾವ ಸಕ್ಷಮ ಪ್ರಾಧಿಕಾರದಿಂದ ನಡೆಸಲಾಗಿರುತ್ತಿದೆಯೇ?
4. ಸದರಿ ತಾತ್ಕಾಲಿಕ ನೌಕರರು ತಡೆರಹಿತವಾಗಿ ಕನಿಷ್ಠ 10 ವರ್ಷಗಳ ಕಾಲ ತಾತ್ಕಾಲಿಕ ನೌಕರರಾಗಿ ಸೇವೆ ಸಲ್ಲಿಸಿರುತ್ತಾರೆಯೆ?
5. ತಾತ್ಕಾಲಿಕ ನೌಕರರು ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳಿಗೆ ತತ್ಸಮಾನ ಹುದ್ದೆಯು ಲಭ್ಯವಿದೆಯೆ?
6. ತಾತ್ಕಾಲಿಕ ನೌಕರರ ಸೇವೆಯಲ್ಲಿ ಲೋಪದೋಷಗಳು ಕಂಡು ಬಂದಾಗ ಅವರ ವಿರುದ್ದ ಶಿಸ್ತು ಕ್ರಮ ಜರುಗಿಸಲು ಲಭ್ಯವಿರುವ ಅವಕಾಶಗಳು.

ಮೇಲ್ಕಂಡ ಮಾನದಂಡಗಳ ಅಳವಡಿಕೆ ಕುರಿತು ಈ ಕೆಳಕಂಡ ವರದಿ ಸಲ್ಲಿಸಲಾಗಿದೆ.

1. State of Punjab v/s Rajendra Singh (LPA No 1024 of 2009)ರಲ್ಲಿ ಘನ ಉಚ್ಚ ನ್ಯಾಯಾಲಯವು ಈ ಕೆಳಕಂಡಂತೆ ಅವಲೋಕನೆಗಳನ್ನು ಮಾಡಿರುತ್ತದೆ.

But if daily wagers, ad hoc or contractual appointees are not appointed against regular sanctioned posts and their services are availed continuously, with notional breaks, by the State Government or its instrumentalities for a sufficient long period i.e. for 10 years, such daily wagers, ad hoc or contractual appointees shall be entitled to minimum of the regular pay scale without any allowances on the assumption that work of perennial nature is available and having worked for such long period of time, an equitable right is created in such category of persons. Their claim for regularization, if any, may have to be considered separately in terms of legally permissible scheme.

In the event, a claim is made for minimum pay scale after more than three years and two months of completion of 10 years of continuous working, a daily wager, ad hoc or contractual employee shall be entitled to arrears for a period of three of three years and two months. (Flag "A")

2. ನೇಮಕಾತಿ ಸಮಯದಲ್ಲಿ ಸದರಿ ಹುದ್ದೆಗೆ ಅವಶ್ಯಕವಿರುವ ಟೈಲರಿಂಗ್ ಮತ್ತು ಕ್ರಾಫ್ಟ್‌ನಲ್ಲಿ ಡಿಪ್ಲೋಂ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳನ್ನೆ ಆಯ್ಕೆ ಮಾಡಲಾಗಿದೆ. (Flag "B")

3. ಹಾಲಿ ಕಾರ್ಯನಿರ್ವಹಿಸುತ್ತಿರುವ ಟೈಲರಿಂಗ್ ಮತ್ತು ನಿಟ್ಟಿಂಗ್ ಟೀಚರ್ ಮತ್ತು ಸೂಪರ್‌ವೈಸರ್‌ಗಳು ಶ್ರಮಿಕ ವಿದ್ಯಾಪೀಠದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಅವರು ನೀಡಿದ ಪಟ್ಟಿಯ ಆಯ್ಕೆ ಮಾಡಿಕೊಳ್ಳಲಾಗಿದೆ.

ಸದರಿ ವಿಷಯಕ್ಕೆ ಸಂಬಂದ ಪಟ್ಟಂತೆ ಕುರಿತು State of Haryana v/s Jasmer Singh ದಾವೆಯಲ್ಲಿ ದಾವೆಗೆ ಸಂಬಂಧಿಸಿದಂತೆ ಭಗವಾನ್ ದಾಸ್ ಕೇಸ್ ನಲ್ಲಿ ಘನ ಉಚ್ಛನ್ಯಾಯಾಲಯವು ಈ ಕೆಳಕಂಡಂತೆ ಅವಲೋಕನೆಯನ್ನು ಮಾಡಿರುತ್ತದೆ.

It will be relevant to notice, that for the posts under reference in the Bhagwan Dass case , the selection of those appointed on regular basis, had to be made through the subordinate selection board, by way of open selection. Whereas, the selection of the petitioners as daily-wagers, was limited to candidates belonging to a cluster of villages, and was not through any specialized selection body/agency. Despite thereof, it was held, that the benefit under the principle of equal work', could not be denied to the petitioners. The aforesaid conclusion was drawn on the ground, that as long as the petitioners were performing similar duties, as those engaged on regular basis (on corresponding posts) from the standpoint of the doctrine of 'equal pay for equal work' , there could be no distinction on the subject of payment of wages. (Flag "C")

4. ಪಾಲಿಕೆಯ ಕಲ್ಯಾಣ ವಿಭಾಗದ ಟೈಲರಿಂಗ್ ಮತ್ತು ನಿಟ್ಟಿಂಗ್ ತರಬೇತಿ ಕೇಂದ್ರಗಳಲ್ಲಿ 10 ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ ತಡೆರಹಿತವಾಗಿ ಸೇವೆ ಸಲ್ಲಿಸಿರುವ ತಾತ್ಕಾಲಿಕ ನೌಕರರ ಪಟ್ಟಿಯನ್ನು ಕಡತದಲ್ಲಿ ಲಗತ್ತಿಸಿದೆ. (Flag "B")

5. ಹಾಲಿ ತಾತ್ಕಾಲಿಕ ನೌಕರರು ಹೊಲಿಗೆ ತರಬೇತಿ ಕೇಂದ್ರಗಳಿಗೆ ಬರುವ ಫಲಾನುಭವಿಗಳಿಗೆ ಹೊಲಿಗೆ, ಕಸೂತಿ, ಮುಂತಾದ ಕರಕುಶಲ ತರಬೇತಿ ನೀಡುತ್ತಿದ್ದು, ಪಾಲಿಕೆ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಇದೇ ವಿಷಯಗಳನ್ನು ಕರಕುಶಲ ತರಬೇತಿ ನೀಡಲು, ಕರಕುಶಲ ಸಹಾಯಕ ಉಪಾಧ್ಯಾಯರನ್ನು (ಕ್ರಾಪ್ಟ್ ಟೀಚರ್) ಖಾಯಂ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ.

6. State of Haryana v/s Jasmer Singh ದಾವೆಯಲ್ಲಿ ಘನ ಉಚ್ಛನ್ಯಾಯಾಲಯವು ಈ ಕೆಳಕಂಡಂತೆ ಅವಲೋಕನೆ ಮಾಡಿರುವುದು ಕಂಡು ಬಂದಿರುತ್ತದೆ.

Temporary employees (irrespective of their nomenclature ) are also never governed by any rules of disciplinary action. As a matter of fact, a daily-wager is engaged only for a day, and his services can be dispensed with at the end of the day for which he is engaged. Rules of disciplinary action, are therefore to the advantage of regular employees, and the absence of their applicability, is to the disadvantage of temporary employees, even though the judgments in State of Haryana v/s Jasmer Singh, seems to project otherwise.

Even the issue of transferability of regular employees referred to in State of Haryana v/s Jasmer Singh, in our view, has not been examined closely. In as much as, temporary employees can be directed to work anywhere, within or outside their cadre, and they have no choice but to accept.

In the view of the position expressed by us in the foregoing paragraph, we have no hesitation in holding, that all the concerned temporary employees, in the present in the bunch of cases, would beentitled to draw wages at the minimum of the pay-scale (at the

lowest grade, in the regular pay-scale), extended to regular employees, holding the same post. (Flag "D")

ಹಾಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಮತ್ತು ಗಣಕಯಂತ್ರ ನಿರ್ವಾಹಕರು ಗಳಿಗೆ ಕರ್ನಾಟಕ ಸರ್ಕಾರದ ಅಧಿಸೂಚನೆಯ ಸಂಖ್ಯೆ:-ಕೆಎಇ/71/ಎಲ್‌ಡಬ್ಲ್ಯೂಎ/2015 ದಿನಾಂಕ: 01-08-2016ರ ಮೇರೆಗೆ ಖಾಯಂ ಪೌರಕಾರ್ಮಿಕರುಗಳಿಗೆ ವೇತನ ಶ್ರೇಣಿಯ, ಕನಿಷ್ಠ ವೇತನ ಮತ್ತು ವಿಡಿಎ ನಿಗಧಿಪಡಿಸಲಾಗಿದೆ. (Flag "E")

ಸದರಿ ವಿಷಯದ ಕುರಿತು ಕಾರ್ಮಿಕ ಆಯುಕ್ತರುರವರು ದಿನಾಂಕ: 20-09-2007 ರ ಪತ್ರದ ಸಂಖ್ಯೆ:ಕಾವೇಕ-2/ಸಿಆರ್-36-2016-17ರ ಪತ್ರದಲ್ಲಿ ಕರಕುಶಲ ಶಿಕ್ಷಕರಿಗೆ ನೀಡುತ್ತಿರುವ ವೇತನ ಶ್ರೇಣಿಗೆ ಅನುಗುಣವಾಗಿ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನಿಗಧಿಗೊಳಿಸುವ ವಿಚಾರದಲ್ಲಿ ಪಾಲಿಕೆಯ ಹಂತದಲ್ಲಿಯೇ ಅಂತಿಮ ತೀರ್ಮಾನವನ್ನು ಕೈಗೊಳ್ಳುವುದೆಂದು ತಿಳಿಸಿರುತ್ತಾರೆ. (Flag "F")

ಕರ್ನಾಟಕ ಸರ್ಕಾರದ ದಿನಾಂಕ:-1/06/2015ರ ಅಧಿಸೂಚನೆ ಸಂಖ್ಯೆ:ಎಫ್‌ಡಿ/30/ಎಸ್‌ಆರ್‌ಪಿ/2013ರಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗದ ಇಲಾಖೆಗಳಿಗೆ ಕರಕುಶಲ ಶಿಕ್ಷಕರುಗಳಿಗೆ 12,500/- ರಿಂದ 24,000/- ವೇತನ ಶ್ರೇಣಿ ನಿಗಧಿಪಡಿಸಿದ್ದು, ಸದರಿ ವೇತನ ಶ್ರೇಣಿಯನ್ನು ಪರಿಗಣಿಸಿದಾಗ ವೇತನ ಶ್ರೇಣಿಯ ಕನಿಷ್ಟ ಮೂಲ ವೇತನ ರೂ. 12,500/- (12,500 ಮತ್ತು ಇತರೆ ಭತ್ಯೆಗಳು) ಈ ಕೆಳಕಂಡತೆ ನಿಗಧಿಪಡಿಸಬೇಕಾಗಿರುತ್ತದೆ. (Flag "G")

| ಕನಿಷ್ಟ ಮೂಲ ವೇತನ | + | ಎಚ್‌ಆರ್‌ಎ (24%) | + | ಡಿಎ (1.75%) | + | ಸಿಸಿಎ | |
|---|---|---|---|---|---|---|---|
| 23,500 | + | 5,640 | + | 411.25 | + | 500 | = 30051 |

ದಿನಾಂಕ:-19/04/2018ರ ಕರ್ನಾಟಕ ಸರ್ಕಾರದ ಆದೇಶದ ಸಂಖ್ಯೆ:ಎಫ್‌ಡಿ/06/ಎಸ್‌ಆರ್‌ಪಿ/2018ರ ಮೇರೆಗೆ 6ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿ 23,500/- ರಿಂದ 47,650/-ನ್ನು ಪರಿಗಣಿಸಿ ರೂ.23,500/- ಕನಿಷ್ಟ ಮೂಲ ವೇತನವನ್ನು ನಿಗಧಿಪಡಿಸಿ ಈ ಕೆಳಕಂಡತೆ ಪಾವತಿಸಬಹುದು. (Flag "H")

| ಕನಿಷ್ಟ ವೇತನ | + | ಎಚ್‌ಆರ್‌ಎ (30%) | + | ಡಿಎ (45.75%) | + | ಸಿಸಿಎ | |
|---|---|---|---|---|---|---|---|
| 23,500 | + | 7,050 | + | 10,751.25 | + | 500 | = 41,801/- |

ಮುಂದುವರೆದಂತೆ, ಹಾಲಿ ಪಾಲಿಕೆಯ ಖಾಯಂ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರಕುಶಲ ಶಿಕ್ಷಕರಿಗೆ ರವರಿಗೆ ರೂ.20,000/- ರಿಂದ 36,300/-ರ ವೇತನ ಶ್ರೇಣಿ ನಿಗಧಿಪಡಿಸಿದ್ದು, (Flag "I")

| ಕನಿಷ್ಟ ವೇತನ | + | ಎಚ್‌ಆರ್‌ಎ (30%) | + | ಡಿಎ (45.75%) | + | ಸಿಸಿಎ | |
|---|---|---|---|---|---|---|---|
| 20,000 | + | 6,000 | + | 9,150 | + | 500 | = 35,65,0/- |

ಹಾಲಿ ಪಾಲಿಕೆ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾಯಂ ಕರಕುಶಲ ಶಿಕ್ಷರಿಗೆ 6ನೇ ವೇತನ ಆಯೋಗದ ಅನುಮೋದಿತ ಶಿಫ್ಹಾರಸ್ಸಿನ ಮೇರೆಗೆ ರೂ.37900-70850/- ರ ವೇತನ ಶ್ರೇಣಿಯನ್ನು ನಿಗಧಿಪಡಿಸಲಾಗಿದೆ. ಸದರಿ ವೇತನ ಶ್ರೇಣಿಗೆ 6ನೇ ವೇತನ ಆಯೋಗದಲ್ಲಿ ರೂ.37,900-70,850/- ತತ್ತಸಂಬಂಧ ಶ್ರೇಣಿಯನ್ನು ಮಂಜೂರು ಮಾಡಲಾಗಿದ್ದು ಇದರ ಮೇರೆಗೆ ಕನಿಷ್ಟ ಮೂಲ ವೇತನ 37,900/- (Flag "J")

ಕನಿಷ್ಟ ವೇತನ + ಎಚ್‌ಆರ್‌ಎ (24%) + ಡಿಎ (1.75%) + ಸಿಸಿಎ
37,900 + 9,096 + 663.25 + 500 = 48,159

ಘನ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಫಿಲ್ ಸಂಖ್ಯೆ: 213 of 2013 date of Punjab & others v/s Jagadish Singh & others ದಾವೆಯಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಸಮಾನ ಕೆಲಸಕ್ಕೆ ಸಮಾನ ವೇತನ ಕುರಿತು ಸಂಬಂಧಪಟ್ಟ ರಾಜ್ಯಗಳ ಉಚ್ಛನ್ಯಾಯಾಲಯಗಳಲ್ಲಿ ಊಡಿರುವ ದಾವೆಗಳಿಗೆ ಜಾರಿ ಮಾಡಲಾಗಿರುವ ಆದೇಶಗಳನ್ನು ಪರಿಗಣಿಸಿ ದಿನಾಂಕ: 26-01-2016 ರಂದು ಈ ಕೆಳಕಂಡಂತೆ ಆದೇಶವನ್ನು ಜಾರಿ ಮಾಡಿರುವುದು ಕಂಡು ಬಂದಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಲ್ಯಾಣ ವಿಭಾಗದಲ್ಲಿ ಸುಮಾರು 20 ವರ್ಷಗಳ ಮೇಲ್ಪಟ್ಟು ಗೌರವ ಸಂಭಾವನೆ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಹೊಲಿಗೆ ಶಿಕ್ಷಕರು/ಹೊಲಿಗೆ ಯಂತ್ರ ದುರಸ್ಥಿಗಾರರ ಮತ್ತು ಸೂಪರ್‌ವೈಸರ್ ರವರ ಸೇವೆಯನ್ನು ಪರಿಗಣಿಸಿ ಮಾನವೀಯತೆಯ ಹಿತದೃಷ್ಠಿಯಿಂದ ಪಾಲಿಕೆ ಕರಕುಶಲ ಶಿಕ್ಷಕರಿಗೆ ನೀಡುತ್ತಿರುವ ವೇತನ ಶ್ರೇಣಿಗೆ ಅನುಗುಣವಾಗಿ ಸಾಮಾನ್ಯ ವೇತನದಡಿಯಲ್ಲಿ ಗೌರವ ಸಂಭಾವನೆಯನ್ನು ನಿಗಧಿಗೊಳಿಸಲು ಆಯುಕ್ತರು ಅಗತ್ಯ ಕ್ರಮ ವಹಿಸಲು ದಿನಾಂಕ:18/06/2016ರಂದು ನಡೆದ ಬಿಬಿಎಂಪಿ ಪಾಲಿಕೆಯ ಸಭೆಯಲ್ಲಿ ತೀರ್ಮಾನಿಸಿರುವುದನ್ನು ದಿನಾಂಕ:20/04/2017ರಂದು ಘನ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿರುವ ಸಂಬಂಧ ದಿನಾಂಕ:-20/04/2017ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ನಗರಾಭಿವೃದ್ದಿ ಇಲಾಖೆರವರಿಂದ ಮಾನ್ಯ ಆಯುಕ್ತರು ರವರಿಗೆ ವಿಳಾಸ ಮಾಡಿರುವ ಪತ್ರದಲ್ಲಿ ಕಾರ್ಮಿಕ ಇಲಾಖೆಯಿಂದ ಸಮಾಲೋಚಿಸಿ ಪಾಲಿಕೆಯಲ್ಲಿ ಸೂಕ್ತ ಕ್ರಮ ಕೈಗೊಂಡು ಹಾಗೂ ಅಗತ್ಯವಿದ್ದಲ್ಲಿ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಿ ಸೂಚಿಸಲಾಗಿದೆ.

ದಿನಾಂಕ: 3/4/1986 ರ ಬೆಂಗಳೂರು ನಗರ ಕಾರ್ಪೋರೇಷನ್ ಸಭೆಯ ವಿಷಯದ ಸಂಖ್ಯೆ: 776/85-86, ದಿನಾಂಕ-01-04-1986ರಲ್ಲಿ ಬೆಂಗಳೂರು ನಗರ ಸಭೆಯ ನಿರ್ಣಯದ ವಿಷಯದಲ್ಲಿ ವಿವಿಧ ಹುದ್ದೆಗೆ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರಿಗೆ ಖಾಯಂ ನೌಕರರ ರೀತಿಯ ಯಾವ ಹುದ್ದೆಗೆ ನೇಮಕ ಹೊಂದಿರುತ್ತಾರೋ ಅವರುಗಳಿಗೆ ಆ ಹುದ್ದೆಯ ವೇತನ, ತುಟ್ಟಿ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲು ಜಾರಿಯಾಗಿರುವ ತೀರ್ಮಾನದ ಮೇರೆಗೆ ಒಟ್ಟು 28 ದಿನಗೂಲಿ ನೌಕರರಿಗೆ ಖಾಯಂ ನೌಕರರ ವೇತನ ಸೌಲಭ್ಯವನ್ನು ನೀಡಲಾಗಿದೆ. (Flag "G")

ನಿಯಮಾವಳಿಗಳ ಮೇರೆಗೆ ಸದರಿ ತಾತ್ಕಲಿಕ ನೌಕಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ನಿಗಧಿಪಡಿಸಿರುವ ಸಂದರ್ಭದಲ್ಲಿ ಈ ಕೆಳಕಂಡ ನಿಯಮ/ಷರತ್ತುಗಳನ್ನು ವಿಧಿಸುವುದು ಅವಶ್ಯವಾಗಿರುತ್ತದೆ

1. ಸಮಾನ ಕೆಲಸಕ್ಕೆ ಸಮಾನ ವೇತನದ ಆಧಾರದ ಮೇಲೆ ಸದರಿ ನೌಕರರು ಖಾಯಂ ನೇಮಕಾತಿಗಾಗಿ ಯಾವುದೇ ಪ್ರಾಧಿಕಾರದ ಹಕ್ಕೋತ್ತಾಯ ಮಂಡಿಸಲು ಅವಕಾಶವಿರುವುದಿಲ್ಲ.
2. ಸದರಿ ನೌಕರರಿಗೆ ಸೇವಾ ಪುಸ್ತಕವನ್ನು ತೆರೆಯಲು ಅವಕಾಶವಿರುವುದಿಲ್ಲ.
3. ಸದರಿ ನೌಕರರಿಗೆ ಒಂದು ತಿಂಗಳ ಸೇವಾವಧಿ ಮುಕ್ತಾಯದ ನಂತರ ಒಂದು ದಿನದ ಸಾಂಧರ್ಭಿಕ ರಜೆ ಪಡೆಯಲು ಅರ್ಹರಿರುತ್ತಾರೆ.
4. ನಿಯಮಾವಳಿಗಳ ಮೇರೆಗೆ ಸದರಿಯವರು 60ವರ್ಷಗಳ ವಯೋಮಿತಿ ಮುಕ್ತಾಯವಾದ ನಂತರ ಕೆಲಸದಲ್ಲಿ ಮುಂದುವರೆಯಲು ಅವಕಾಶವಿರುವುದಿಲ್ಲ ಹಾಗೂ ಈ ವಿಷಯದಲ್ಲಿ ಯಾವುದೇ ಫಿರ್ಯಾದನ್ನು/ಮನವಿಯನ್ನು ಪರಿಗಣಿಸಲಾಗುವುದಿಲ್ಲ.
5. ಸದರಿಯವರಿಗೆ ನಿಗಧಿಪಡಿಸಿದ ವೇತನಕ್ಕೆ ಯಾವುದೇ ವಾರ್ಷಿಕ ಬಡ್ತಿ ಅನ್ವಯವಾಗುವುದಿಲ್ಲ.

6. ಸದರಿಯವರ ಸೇವೆಯನ್ನು ಮುಂಬಡ್ತಿಗೆ ಪರಿಗಣಿಸಲಾಗುವುದಿಲ್ಲ.
7. ಮೇಲ್ಕಂಡ ಷರತ್ತುಗಳನ್ನು ಒಳಪಡಿಸಿದಂತೆ ಖಾಯಂ ನೌಕಕರಿಗೆ ಲಭ್ಯವಿರುವ ಬೇರೆ ಇನ್ನಿತರೇ ಯಾವುದೇ ಸೇವಾ ಮತ್ತು ಆರ್ಥಿಕ ಸೌಲಭ್ಯಗಳು ಅನ್ವಯವಾಗುವುದಿಲ್ಲ.

ಮೇಲ್ಕಂಡ ಅಂಶಗಳನ್ನು ತಮ್ಮ ಅವಗಾಹನೆಗೆ ಇರಿಸಿ ದಿನಾಂಕ:- 18/06/2016ರ ಪಾಲಿಕೆಯ ಸಭೆಯ ತೀರ್ಮಾನದ ಹಿನ್ನಲೆಯಲ್ಲಿ ಹಾಗೂ ದಿನಾಂಕ:-01/04/2018ರಿಂದ ಅನ್ವಯವಾಗುವಂತೆ ಹೊಲಿಗೆ ತರಬೇತಿ ಶಿಕ್ಷಕಿಯರಿಗೆ ಘನ ಉಚ್ಚ ನ್ಯಾಯಲಯದ ಆದೇಶದ ಮೇರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನಿಗಧಿಪಡಿಸುವ ಬಗ್ಗೆ ಆರ್ಥಿಕ ಹಾಗೂ ಆಡಳಿತಾತ್ಮಕ ಅನುಮೋದನೆಗಾಗಿ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ **ದಿನಾಂಕ: 09-07-2018ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ರಸ್ತಾವನೆಯಲ್ಲಿ ನಿಗಧಿಪಡಿಸಿರುವ ಸೇವಾ ನಿಯಮಗಳ ಷರತ್ತಿಗೊಳಪಡಿಸಿ ಸಮಾನ ಕೆಲಸಕ್ಕೆ ಸಮಾನ ವೇತನದ ಅಡಿಯಲ್ಲಿ ಪಾಲಿಕೆಯ ಖಾಯಂ ಕ್ರಾಫ್ಟ್ ಟೀಚರ್‌ಗಳಿಗೆ ನಿಗಧಿಪಡಿಸಿರುವ ವೇತನ ಶ್ರೇಣಿ ರೂ.20,000 - 36,300 ರಲ್ಲಿ ಕನಿಷ್ಟ ಮೂಲ ವೇತನ ರೂ.20,000/- ಹಾಗೂ ಅದಕ್ಕೆ ಅನ್ವಯವಾಗುವ ಇತರ ಭತ್ಯೆಗಳನ್ನು ಪಾವತಿಸಲು ಸಮಿತಿಯು ಸರ್ವಾನುಮತದಿಂದ ಅನುಮೋದಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ತೀರ್ಮಾನಿಸಿರುವ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ದಿನಾಂಕ: 27.08.2018ರ ಸಭೆಯ ನಿರ್ಣಯ.**

**ನಿರ್ಣಯ: ಸರ್ಕಾರದ ಮಾರ್ಗಸೂಚಿಯನ್ವಯ ಸಮಾನ ಕೆಲಸಕ್ಕೆ ಸಮಾನ ವೇತನದಡಿಯಲ್ಲಿ ವೇತನ ಪಾವತಿಸಲು ಒಪ್ಪಿದೆ.**

**ಸ್ವ ನಿರ್ಣಯ: [SUO-MOTTO DECISION]**

***20]. ವಿಷಯದ ಸಂಖ್ಯೆ: ತೆಆಸ್ಥಾಸ/ 31 /2018-19***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ಸಂಘ (ರಿ), ನೌಕರರ ಭವನ, ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560 002 ರವರು ಪೂಜ್ಯ ಮಹಾಪೌರರು ರವರಿಗೆ ಪತ್ರವನ್ನು ನೀಡಿ, ಪಾಲಿಕೆಯ ಅಧಿಕಾರಿ/ನೌಕರರ ಹಿತದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಲುವಾಗಿ 2018-19ನೇ ಸಾಲಿನ ಆಯವ್ಯಯದಲ್ಲಿ ರೂ.20.00 ಲಕ್ಷಗಳನ್ನು ಮೀಸಲಿರಿಸಲು ಕೋರಿ ಪತ್ರವನ್ನು ನೀಡಿದ್ದರೂ ಸಹ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿರುವುದಿಲ್ಲ. ಆದ್ದರಿಂದ ಅನುದಾನವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಪೂಜ್ಯ ಮಹಾಪೌರರು, 2018-19ನೇ ಸಾಲಿಗೆ ಸದರಿ ಸಂಘದವರು ಕೋರಿರುವಂತೆ ಅನುದಾನದ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವಂತೆ ಪತ್ರದ ಮೇಲೆ ಸೂಚಿಸಿರುತ್ತಾರೆ.

ಆದ್ದರಿಂದ, 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.0048 ಪುಟ ಸಂಖ್ಯೆ 35 ರಲ್ಲಿ ರೂ.800.00 ಕೋಟಿ ಅನುದಾನ ಮೀಸಲಿರಿಸಿ, ಅನುಬಂಧ-4 ರಲ್ಲಿ ರೂ.665.00 ಲಕ್ಷಗಳಿಗೆ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.ಆದ್ದರಿಂದ, ಲಭ್ಯವಿರುವ ಅನುದಾನದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ಸಂಘ (ರಿ), ಬೆಂಗಳೂರು ರವರಿಗೆ ರೂ.20.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಸಂಸ್ಥೆಗೆ ಬಿಡುಗಡೆ ಮಾಡಲು ಆಯುಕ್ತರು ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

**ಸ್ವ ನಿರ್ಣಯ: [SUO-MOTTO DECISION]**

***21]. ವಿಷಯದ ಸಂಖ್ಯೆ: ತೆಆಸ್ಥಾಸ/ 32 /2018–19***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018–19ನೇ ಸಾಲಿನ ಆಯವ್ಯಯದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ವಾರ್ಡ್ ಸಂಖ್ಯೆ 69ಕ್ಕೆ ಅನುದಾನವಾಗಿ ಲೆಕ್ಕ ಶೀರ್ಷಿಕೆ ಪಿ.3398 ಪುಟ ಸಂಖ್ಯೆ 125ರಲ್ಲಿ ರೂ.600.00 ಲಕ್ಷ ಮತ್ತು ಪಿ. ಸಂಖ್ಯೆ 3508 ಪುಟ ಸಂಖ್ಯೆ 127 ರಲ್ಲಿ ರೂ.200.00 ಲಕ್ಷ ಒಟ್ಟು ರೂ.800.00 ಲಕ್ಷಗ'ಳನ್ನು ಒದಗಿಸಲಾಗಿದ್ದು, ವಾರ್ಡ್ 69ರ ಪಾಲಿಕೆ ಸದಸ್ಯರು ಪತ್ರವನ್ನು ನೀಡಿ ತಮ್ಮ ವಾರ್ಡ್ 69ಕ್ಕೆ ಮೀಸಲಿರಿಸಿರುವ ವಿಶೇಷ ಅಭಿವೃದ್ಧಿ ಅನುದಾನ ರೂ.800.00 ಲಕ್ಷಗಳಲ್ಲಿ ವಾರ್ಡ್ ಸಂಖ್ಯೆ 184ಕ್ಕೆ ರೂ.500.00 ಲಕ್ಷ ಮತ್ತು ವಾರ್ಡ್ ಸಂಖ್ಯೆ 196ಕ್ಕೆ ರೂ.300.00 ಲಕ್ಷಗಳ ಅನುದಾನವನ್ನು ಅಭಿವೃದ್ಧಿ ಕಾಮಗಾರಿಗಳಿಗೆ ವರ್ಗಾವಣೆ ಮಾಡಲು ಕೋರಿರುತ್ತಾರೆ ಮತ್ತು ಅದೇ ರೀತಿ ವಾರ್ಡ್ 13ರ ಪಾಲಿಕೆ ಸದಸ್ಯರು ಪತ್ರವನ್ನು ನೀಡಿ ತಮ್ಮ ವಾರ್ಡ್ 13ಕ್ಕೆ ಮೀಸಲಿರಿಸಿರುವ ಪಿ. ಸಂಖ್ಯೆ 3518 ರಲ್ಲಿನ ರೂ.300.00 ಲಕ್ಷಗಳನ್ನು ವಾರ್ಡ್ ಸಂಖ್ಯೆ 04ರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.300.00 ಲಕ್ಷಗಳನ್ನು ಮರು ಹಂಚಿಕೆ ಮಾಡಲು ಕೋರಿರುತ್ತಾರೆ.

ಆದ್ದರಿಂದ, ಮೇಲ್ಕಂಡಂತೆ ವಾರ್ಡ್ 69ಕ್ಕೆ ಮೀಸಲಿರಿಸಿದ ಅನುದಾನ ರೂ.800.00 ಲಕ್ಷ ಮತ್ತು ವಾರ್ಡ್ 13ಕ್ಕೆ ಮಿಸಲಿರಿಸಿದ ರೂ.300.00 ಲಕ್ಷಗಳನ್ನು ಅನುದಾನವನ್ನು ಹಿಂಪಡೆದು, ಈ ಕೆಳಕಂಡಂತೆ ಅನುದಾನವನ್ನು ಮರು ಹಂಚಿಕೆ ಮಾಡಿ ಕಾಮಗಾರಿ ಸಂಖ್ಯೆ ನೀಡಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ನಿರ್ಣಯ ಕೈಗೊಂಡಿರುತ್ತದೆ.

1. ಪಿ.ಸಂಖ್ಯೆ ಪಿ.3443 ಪುಟ ಸಂಖ್ಯೆ 126 ರಲ್ಲಿ ವಾರ್ಡ್ ಸಂಖ್ಯೆ 184ಕ್ಕೆ ರೂ.200.00 ಲಕ್ಷ ಅನುದಾನ ಮೀಸಲಿರಿಸಿದ್ದು, ಸದರಿ ಅನುದಾನವನ್ನು ರೂ.700.00 ಲಕ್ಷಗಳಿಗೆ ಮತ್ತು ವಾರ್ಡ್ 196ಕ್ಕೆ ರೂ.200.00 ಲಕ್ಷ ಅನುದಾನ ಮೀಸಲಿರಿಸಿದ್ದು, ಸದರಿ ಅನುದಾನವನ್ನು ರೂ.500.00 ಲಕ್ಷಗಳಿಗೆ ಪರಿಷ್ಕರಿಸುವುದು.
2. ಪಿ.ಸಂಖ್ಯೆ 3521 ಪುಟ ಸಂಖ್ಯೆ 129 ರಲ್ಲಿ ವಾರ್ಡ್ 04ಕ್ಕೆ ರೂ.300.00 ಲಕ್ಷ ಅನುದಾನ ಮೀಸಲಿರಿಸಿದ್ದು, ಸದರಿ ಅನುದಾನವನ್ನು ರೂ.600.00 ಲಕ್ಷಗಳಿಗೆ ಪರಿಷ್ಕರಿಸುವುದು.

**ಸ್ವ ನಿರ್ಣಯ: [SUO-MOTTO DECISION]**

***22]. ವಿಷಯದ ಸಂಖ್ಯೆ: ತೆಆಸ್ಥಾಸ/ 33 /2018–19***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018–19ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡ ಲೆಕ್ಕಶೀರ್ಷಿಕೆಗಳ ಅಡಿ ಅನುಬಂಧ–1ರಲ್ಲಿ ವಿವಿಧ ವಾರ್ಡ್‌ಗಳಿಗೆ ಅನುದಾನವನ್ನು ಹಂಚಿಕೆ ಮಾಡಲಾಗಿದ್ದು, ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿ ಅನುದಾನವನ್ನು ಮರು ಹಂಚಿಕೆ/ನಿಗಧಿ ಮಾಡಿದ್ದು, ಅದರಂತೆ ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

(ರೂ.ಲಕ್ಷಗಳಲ್ಲಿ)

| ಕ್ರ.ಸ | ಲೆಕ್ಕ ಶೀರ್ಷಿಕೆ | ಪುಟ ಸಂಖ್ಯೆ | ಆಯವ್ಯಯದಲ್ಲಿ ಹಂಚಿಕೆ ಮಾಡಿದ ವಾರ್ಡ್ ಸಂಖ್ಯೆ ಮತ್ತು ಮೊತ್ತ | ಒಟ್ಟು ಮೊತ್ತ | ಮರು ನಿಗದಿಪಡಿಸಿದ ವಾರ್ಡ್ ಸಂಖ್ಯೆ ಮತ್ತು ಮೊತ್ತ | ಒಟ್ಟು ಮೊತ್ತ |
|---|---|---|---|---|---|---|
| 1 | ಪಿ.3290 | 170 | ವಾರ್ಡ್ 32ಕ್ಕೆ ರೂ.25.00 ಲಕ್ಷ<br>ವಾರ್ಡ್ 89ಕ್ಕೆ ರೂ.20.00 ಲಕ್ಷ<br>ವಾರ್ಡ್ 165ಕ್ಕೆ ರೂ.2.50 ಲಕ್ಷ<br>ವಾರ್ಡ್ 179ಕ್ಕೆ ರೂ.2.50 ಲಕ್ಷ | 50.00 | ವಾರ್ಡ್ 165ಕ್ಕೆ ರೂ.25.00 ಲಕ್ಷ,<br>ವಾರ್ಡ್ 179ಕ್ಕೆ ರೂ.25.00 ಲಕ್ಷ | 50.00 |
| 2 | ಪಿ.3291 | 64 | ವಾರ್ಡ್ 32ಕ್ಕೆ ರೂ.12.50 ಲಕ್ಷ | 25.00 | ವಾರ್ಡ್ 32ಕ್ಕೆ ರೂ.25.00 ಲಕ್ಷ, | 25.00 |

| | | | | | | |
|---|---|---|---|---|---|---|
| | | | ವಾರ್ಡ್ 89ಕ್ಕೆ ರೂ.10.00 ಲಕ್ಷ<br>ವಾರ್ಡ್ 165ಕ್ಕೆ ರೂ.1.25 ಲಕ್ಷ<br>ವಾರ್ಡ್ 179ಕ್ಕೆ ರೂ.1.25 ಲಕ್ಷ | | | |
| 3 | ಪಿ.3292 | 63 | ವಾರ್ಡ್ 32ಕ್ಕೆ ರೂ.12.50 ಲಕ್ಷ<br>ವಾರ್ಡ್ 89ಕ್ಕೆ ರೂ.10.00 ಲಕ್ಷ<br>ವಾರ್ಡ್ 165ಕ್ಕೆ ರೂ.1.25 ಲಕ್ಷ<br>ವಾರ್ಡ್ 179ಕ್ಕೆ ರೂ.1.25 ಲಕ್ಷ | 25.00 | ವಾರ್ಡ್ 32ಕ್ಕೆ ರೂ.25.00 ಲಕ್ಷ, | 25.00 |
| 4 | ಪಿ.3293 | 139 | ವಾರ್ಡ್ 32ಕ್ಕೆ ರೂ.50.00 ಲಕ್ಷ<br>ವಾರ್ಡ್ 89ಕ್ಕೆ ರೂ.40.00 ಲಕ್ಷ<br>ವಾರ್ಡ್ 165ಕ್ಕೆ ರೂ.5.00 ಲಕ್ಷ<br>ವಾರ್ಡ್ 179ಕ್ಕೆ ರೂ.5.00 ಲಕ್ಷ | 100.00 | ವಾರ್ಡ್ 32ಕ್ಕೆ ರೂ.100.00 ಲಕ್ಷ, | 100.00 |
| 5 | ಪಿ.3294 | 139 | ವಾರ್ಡ್ 32ಕ್ಕೆ ರೂ.12.50 ಲಕ್ಷ<br>ವಾರ್ಡ್ 89ಕ್ಕೆ ರೂ.10.00 ಲಕ್ಷ<br>ವಾರ್ಡ್ 165ಕ್ಕೆ ರೂ.1.25 ಲಕ್ಷ<br>ವಾರ್ಡ್ 179ಕ್ಕೆ ರೂ.1.25 ಲಕ್ಷ | 25.00 | ವಾರ್ಡ್ 32ಕ್ಕೆ ರೂ.25.00 ಲಕ್ಷ, | 25.00 |
| 6 | ಪಿ.3295 | 139 | ವಾರ್ಡ್ 32ಕ್ಕೆ ರೂ.37.50 ಲಕ್ಷ<br>ವಾರ್ಡ್ 89ಕ್ಕೆ ರೂ.30.00 ಲಕ್ಷ<br>ವಾರ್ಡ್ 165ಕ್ಕೆ ರೂ.3.75 ಲಕ್ಷ<br>ವಾರ್ಡ್ 179ಕ್ಕೆ ರೂ.3.75 ಲಕ್ಷ | 75.00 | ವಾರ್ಡ್ 89ಕ್ಕೆ ರೂ.75.00 ಲಕ್ಷ, | 75.00 |
| 7 | ಪಿ.3296 | 140 | ವಾರ್ಡ್ 32ಕ್ಕೆ ರೂ.37.50 ಲಕ್ಷ,<br>ವಾರ್ಡ್ 89ಕ್ಕೆ ರೂ.30.00 ಲಕ್ಷ<br>ವಾರ್ಡ್ 165ಕ್ಕೆ ರೂ.3.75 ಲಕ್ಷ,<br>ವಾರ್ಡ್ 179ಕ್ಕೆ ರೂ.3.75 ಲಕ್ಷ | 75.00 | ವಾರ್ಡ್ 89ಕ್ಕೆ ರೂ.75.00 ಲಕ್ಷ, | 75.00 |
| 8 | ಪಿ.3297 | 164 | ವಾರ್ಡ್ 32ಕ್ಕೆ ರೂ.25.00 ಲಕ್ಷ<br>ವಾರ್ಡ್ 89ಕ್ಕೆ ರೂ.20.00 ಲಕ್ಷ<br>ವಾರ್ಡ್ 165ಕ್ಕೆ ರೂ.2.50 ಲಕ್ಷ<br>ವಾರ್ಡ್ 179ಕ್ಕೆ ರೂ.2.50 ಲಕ್ಷ | 50.00 | ವಾರ್ಡ್ 89ಕ್ಕೆ ರೂ.50.00 ಲಕ್ಷ, | 50.00 |
| 9 | ಪಿ.3298 | 91 | ವಾರ್ಡ್ 32ಕ್ಕೆ ರೂ.37.50 ಲಕ್ಷ,<br>ವಾರ್ಡ್ 89ಕ್ಕೆ ರೂ.30.00 ಲಕ್ಷ<br>ವಾರ್ಡ್ 165ಕ್ಕೆ ರೂ.3.75 ಲಕ್ಷ,<br>ವಾರ್ಡ್ 179ಕ್ಕೆ ರೂ.3.75 ಲಕ್ಷ | 75.00 | ವಾರ್ಡ್ 32ಕ್ಕೆ ರೂ.75.00 ಲಕ್ಷ, | 75.00 |

**ಸ್ವ ನಿರ್ಣಯ: [SUO-MOTTO DECISION]**

***23]. ವಿಷಯದ ಸಂಖ್ಯೆ: ತೆಲಸ್ಥಾಸ/ 34 /2018-19***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ ಪಿ.3515 ಪುಟ ಸಂಖ್ಯೆ 128 ರಲ್ಲಿ ವಾರ್ಡ್ 75ಕ್ಕೆ ರೂ.4.00 ಕೋಟಿ ಹಂಚಿಕೆ ಮಾಡಲಾಗಿದೆ ಮತ್ತು ಲೆಕ್ಕ ಶೀರ್ಷಿಕೆ ಪಿ.3527 ಪುಟ ಸಂಖ್ಯೆ 130 ರಲ್ಲಿ ರೂ.10.00 ಕೋಟಿಅನುದಾನ ಹಂಚಿಕೆ ಮಾಡಲಾಗಿದೆ.

ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸದರಿಅನುದಾನವನ್ನು ವಾರ್ಡ್‌ವಾರು ಮರು ಹಂಚಿಕೆ/ನಿಗಧಿ ಮಾಡಿದ್ದು, ಅದರಂತೆಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

ಮುಂದುವರೆದು, ಲೆಕ್ಕಶೀರ್ಷಿಕೆ ಪಿ.3400 ಪುಟ ಸಂಖ್ಯೆ 126 ರಲ್ಲಿ ವಾರ್ಡ್ 75ಕ್ಕೆ ರೂ.20.00 ಕೋಟಿ ಹಂಚಿಕೆ ಮಾಡಲಾಗಿದೆ. ಸದರಿ ಲೆಕ್ಕಶೀರ್ಷಿಕೆಯಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ರೂ.20.00

ಕೋಟಿ ಅನುದಾನವನ್ನು ಕೆಳಕಂಡಂತೆ ಮರು ಹಂಚಿಕೆ ಮಾಡಿದ್ದು, ಅದರಂತೆ ಜಾಬ್ ಸಂಖ್ಯೆ ನೀಡಲು ಆಯುಕ್ತರು ಕ್ರಮಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.

| ಕ್ರ.ಸ. | ವಾರ್ಡ್ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 12 | 200.00 |
| 2 | 26 | 100.00 |
| 3 | 40 | 200.00 |
| 4 | 68 | 200.00 |
| 5 | 72 | 200.00 |

| ಕ್ರ.ಸ. | ವಾರ್ಡ್ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 6 | 73 | 100.00 |
| 7 | 88 | 200.00 |
| 8 | 153 | 100.00 |
| 9 | 168 | 100.00 |
| 10 | 174 | 200.00 |

| ಕ್ರ.ಸ. | ವಾರ್ಡ್ ಸಂಖ್ಯೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 11 | 184 | 100.00 |
| 12 | 194 | 100.00 |
| 13 | 196 | 200.00 |

**(ಮಹದೇವ. ಎಂ)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**